

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 58 | Wednesday 06-11-2024 | E-mail : maruti.b.hosamani76@gmail.com | Page: 4 | Price : Rs. 1/-

## ನಾಗರಬಾವಿ ಕಛೇರಿಯಲ್ಲಿ ಸಿ.ಸಿ.ಟಿ.ವಿ ಅಳವಡಿಕೆಯಿಲ್ಲ, ಸಾರ್ವಜನಿಕರಿಗೆ ಮಾಹಿತಿಯ–ಕೊರತೆಯ ಅಸಮಾಧಾನ

**ಸಿಹಿ ಕಹಿ ಸುದ್ದಿ**

**ಬೆಂಗಳೂರು** : ನಾಗರಭಾವಿಯ ಉಪ–ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಿ.ಸಿ.ಟಿ.ವಿ ಅಳವಡಿಕೆ ಇಲ್ಲದ ಕಾರಣ, ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಕೋರಿದ ದೃಶ್ಯಾವಳಿ ನಮೂನೆಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ ಎಂದು ಅಧಿಕಾರಿಗಳು ಸ್ಪಷ್ಟೀಕರಣ ನೀಡಿದ್ದು, ಸಾರ್ವಜನಿಕರ ಕುತೂಹಲಕ್ಕೆ ತೆರೆ ಬಿದ್ದಿದೆ.

ಘಟನೆ ಹಿನ್ನೆಲೆ:–

ಸಾಮಾಜಿಕ ಹೋರಾಟಗಾರ್ತಿ ಗೀತಾ.ಎಸ್ ಗೌಡ ಅವರು ಮಾಹಿತಿ ಹಕ್ಕು ಕಾಯ್ದೆ 2005 ರಡಿ, ಜನವರಿ 1, 2024 ರಿಂದ ಇತ್ತೀಚಿನ ವರೆಗಿನ ಸಿ.ಸಿ.ಟಿ.ವಿ ದೃಶ್ಯಾವಳಿ ಕೇಳಿ, 24 ಸೆಪ್ಟೆಂಬರ್ 2024 ರಂದು ಅರ್ಜಿಯನ್ನು ಸಲ್ಲಿಸಿದ್ದರು. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು, 352 ಸಂ–ಖ್ಯೆ ಉಲ್ಲೇಖಿಸಿ, ಅಧಿಕಾರಿಗಳಿಂದ ಸ್ಪಷ್ಟನೆ ಒದಗಿಸಿದೆ.

ಅಧಿಕಾರಿಗಳ ಸ್ಪಷ್ಟನೆ:–

ನಾಗರಭಾವಿ 2 ನೇ ಹಂತ, 3 ನೇ ಬ್ಲಾಕ್ನಲ್ಲಿರುವ "ಲೀಲಾ ಆರ್ಕೆಡ್" ಬಿ.ಡಿ.ಎ ಕಾಂಪ್ಲೆಕ್ಸ್ ಹಿಂಭಾಗದ ಉಪ–ನೋಂದಣಾಧಿಕಾರಿಗಳ ಕಚೇರಿಯಲ್ಲಿ ಸಿ.ಸಿ.ಟಿ.ವಿ ಅಳವಡಿಕೆ ಇಲ್ಲ ಎಂದು ಕಚೇರಿ ಸ್ಪಷ್ಟ ಪಡಿಸಿದೆ. ಸಿ.ಸಿ.ಟಿ.ವಿ ಇಲ್ಲದ ಹಿನ್ನೆಲೆಯಲ್ಲಿ, ಆರ್ಟಿಐ ಅಡಿಯಲ್ಲಿ ಕೇಳಲಾದ ದೃಶ್ಯಾವಳಿಗಳ ನಕಲು ಪ್ರತಿಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ ಎಂಬುದು ಅಧಿಕಾರಿಗಳ ನಿರ್ಧಾರವಾಗಿದೆ.

ಸಾಮಾಜಿಕ ಹೋರಾಟಗಾರರ ಅಸಮಾಧಾನ:–

ಗೀತಾ.ಎಸ್ ಗೌಡ ಅವರು ಕಚೇರಿಯಲ್ಲಿ ಸಿ.ಸಿ.ಟಿ.ವಿ ಅಳವಡಿಸಲಾಗದಿರುವ ವಿಷಯವನ್ನು ತೀವ್ರವಾಗಿ ಪ್ರಶ್ನಿಸಿದ್ದಾರೆ. ಕಚೇರಿಯಲ್ಲಿ ಸಾರ್ವಜನಿಕ ಭದ್ರತೆ ಮತ್ತು ನ್ಯಾಯಾಲಯ ಪ್ರಕ್ರಿಯೆಗಳಿಗೆ ಸಂಬಂಧಪಟ್ಟ ಮಾಹಿತಿಗಾಗಿ ಸಿ.ಸಿ.ಟಿ.ವಿ ಕಡ್ಡಾಯವಾಗಿ ಇರಬೇಕು ಎಂಬುದು ಅವರ ಅಭಿಪ್ರಾಯವಾಗಿದೆ. "ಈ ರೀತಿಯ ಕಚೇರಿಯಲ್ಲಿ ಸಿ.ಸಿ.ಟಿ.ವಿ ವ್ಯವಸ್ಥೆ ಇರದೆ ಇದ್ದರೆ, ಯಾವುದೇ ದೋಷಪೂರ್ಣ ಕ್ರಿಯೆಯ ಸಂದರ್ಭದಲ್ಲಿ ಸಾಕ್ಷ್ಯಾಧಾರ ದೊರಕುವುದು ಕಷ್ಟ," ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.



ಮಾಹಿತಿ ಹಕ್ಕು ಪ್ರಕ್ರಿಯೆ:–

ಪ್ರಸ್ತುತ ಉಲ್ಲೇಖಿತ ಕಚೇರಿಯ ಮೇಲ್ಮನವಿ ಪ್ರಾಧಿಕಾರಿಯು ರಾಜಾಜಿನಗರ ನೋಂದಣಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ವಿಷಯದಲ್ಲಿ ಪುನಃ ಮನವಿ ಸಲ್ಲಿಸಲು ಅವಕಾಶವಿದೆ. ಮಾಹಿತಿ ಹಕ್ಕು ಕಾಯ್ದೆಯ ಪ್ರಕಾರ, ಕೋರಿದ ಮಾಹಿತಿಯ ಸರಿಯಾದ ಪರಿಹಾರ ದೊರಕಬೇಕು ಎಂದು ಹೋರಾಟಗಾರರು ನಂಬಿದ್ದಾರೆ.

**ನೀತಿ ಸೂತ್ರ:**

ಸಾರ್ವಜನಿಕ ಸುರಕ್ಷತೆ ಮುಖ್ಯ ಈ ವಿಷಯವು ಸರ್ಕಾರದ ಇಲಾಖೆಗಳಲ್ಲಿನ ಸಾರ್ವಜನಿಕ ಸುರಕ್ಷತೆಯ ಸನ್ನಿವೇಶಗಳನ್ನು ತೀವ್ರ ಗೊಳಿಸುತ್ತದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎಂ.ಎಂ. ಶರ್ಮಾ ಬೆಳಗಾವಿ**

## ನೂತನ ನೌಕರರ ಸಂಘದ ನಿರ್ದೇಶಕರಿಗೆ ಪ್ರಮಾಣ ಪತ್ರ ವಿತರಣೆ

**ಸಿಹಿ ಕಹಿ ಸುದ್ದಿ**

**ಕೊಟ್ಟೂರು** : ಕೊಟ್ಟೂರಿನ ಸರ್ಕಾರಿ ನೌಕರರ ಸಂಘಕ್ಕೆ 2024–2029 ನೇ. ಅವಧಿಗೆ ನಡೆದ ನಿರ್ದೇಶಕರ 20 ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 15 ಸ್ಥಾನಗಳಿಗೆ ಅವಿರೋಧವಾಗಿ ಹಾಗೂ 5 ಸ್ಥಾನಗಳಿಗೆ ಚುನಾವಣೆ ಮೂಲಕ ಆಯ್ಕೆ ಯಾಗಿರುತ್ತಾರೆ. ನೂತನವಾಗಿ ಆಯ್ಕೆಯಾದ ಎಲ್ಲಾ ಸದಸ್ಯರಿಗೆ ಪ್ರಮಾಣಗಳನ್ನು ವಿತರಣೆ ಮಾಡಿ ಸಂಘದಿಂದ ಸನ್ಮಾನಿಸಲಾಯಿತು.




ಈ ಸಮಯದಲ್ಲಿ ಸಹಾಯಕ ಚುನಾವಣಾ ಅಧಿಕಾರಿಗಳಾದ ರೇವಣ್ಣ ಇವರು ಮಾತನಾಡಿ ಯಾವುದೇ ಸಂಘರ್ಷ ವಿಲ್ಲದೇ ಶಾಂತಿಯುತವಾಗಿ ಚುನಾವಣೆಗೆ ಸಹಕರಿಸಿರುತ್ತೀರಿ. ನೂತನವಾಗಿ ಚುನಾಯಿತರಾದ ನಿರ್ದೇಶಕರು ಕೊಟ್ಟೂರು ತಾಲೂಕಿನಲ್ಲಿ ಇನ್ನೂ ಅನೇಕ ಕಛೇರಿಗಳು ಪ್ರಾರಂಭ ವಾಗಿರುವುದಿಲ್ಲ. ತಾವೆಲ್ಲೂ ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಎಲ್ಲಾ ಇಲಾಖೆಗಳು ಪ್ರಾರಂಭವಾಗುವಂತೆ ಪ್ರಯತ್ನಿಸ ಬೇಕೆಂದು ಸಲಹೆ ನೀಡಿದರು. ಸಭೆಯಲ್ಲಿ ಮುಖ್ಯಅತಿಥಿಗಳಾಗಿ ಆಗಮಿಸಿದ್ದ ತಹಶೀಲ್ದಾರರಾದ ಅಮರೇಶ ಜಿ.ಕೆ ಇವರು ತಾವೆಲ್ಲರೂ ಬೇರೆ ಬೇರೆ ಇಲಾಖೆಯಿಂದ ಆಯ್ಕೆಯಾಗಿ ಬಂದಿದ್ದರೂ ಎಲ್ಲರೂ ಸ್ನೇಹಯುತವಾಗಿ ಸಂಘದಲ್ಲಿದ್ದು, ನೌಕರರ ಶ್ರೇಂಯೋಭಿವೃದ್ಧಿಗೆ ಶ್ರಮಿಸಬೇಕೆಂದು ಶುಭ ಕೋರುತ್ತಾ ಪ್ರಮಾಣ ಪತ್ರವನ್ನು ನೀಡಿದರು. 2019–2024 ರ ವರೆಗೆ ಕರ್ತವ್ಯ ನಿರ್ವಹಿಸಿದ ಸಂಘದ ಅಧ್ಯಕ್ಷರಾದ ಜಗದೀಶ. ಕೆ, ಖಜಾಂಚಿ–ಬಸವರಾಜ ಹಾಗೂ ಕಾರ್ಯದರ್ಶಿ– ಸಿದ್ದಪ್ಪ ಜಿ ಇವರಿಗೆ ಅಭಿನಂದನೆಯನ್ನು ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಚುನಾವಣಾ ಅಧಿಕಾರಿಯಾದ ಸುರೇಶ್, ವಿವಿಧ ಇಲಾಖೆಯ ನೌಕರರು ಹಾಜರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

## ಶಿಷ್ಟಾಚಾರ ಉಲ್ಲಂಘಿಸಿ ದಿವ್ಯ ಮೌನಕ್ಕೆ ಶರಣಾದ ತಾಲೂಕ ಆಡಳಿತ

**ಮಾನ್ವಿ** : ಸರಕಾರ ಸೂಚಿಸಿದ ಮಾನದಂಡದಂತೆ ಪ್ರತಿ ಕಾರ್ಯಕ್ರಮಕ್ಕೆ ಅಧಿಕಾರಿಗಳು ಭಾಗವಹಿಸಿ ಶಿಷ್ಟಾಚಾರ ಪಾಲನೆ ಮಾಡಬೇಕು. ಆದರೆ ರಾಯಚೂರು ಜಿಲ್ಲೆಯ ಮಾನ್ವಿಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಇಲ್ಲದಿರುವುದನ್ನು ಕಂಡು ಶಾಸಕ ಹಂಪಯ್ಯ ನಾಯಕರು ಕಿಡಿ–ಕಾರಿದ್ದಾರೆ.



ಪ್ರತಿ ಜಯಂತಿ ಸಭೆಗೆ ಆಹ್ವಾನ ನೀಡದೆ ನಿಮ್ಮಷ್ಟಕ್ಕೆ ನೀವೆ ಸಭೆ ಮಾಡುತ್ತೀರಾ ಅಂದ ಮೇಲೆ ಶಾಸಕರ ಬಗ್ಗೆ ನಿಮಗೆ ಗೌರವ ಇದೇನಾ ಅಥವಾ ನಿಮ್ಮಷ್ಟದಂತೆ ನಡೆದು ಬಿಡಿ ಎಲ್ಲ ನಿಮ್ಮದೆ ಕಾರುಬಾರು ಎಂದು ವೇದಿಕೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಾನ್ವಿಯಲ್ಲಿ ಆಡಳಿತ ವ್ಯವಸ್ಥೆ ಹದಗೆಟ್ಟಿದ್ದು, ಇಲ್ಲಿ ಯಾರು ಹೇಳೋರು ಕೇಳೋರು ಯಾರು ಇಲ್ಲವಾಗಿದ್ದರಿಂದ ಶಾಸಕ ಹಂಪಯ್ಯ ನಾಯಕ ಅವರು ಸಹ ಸರಕಾರಿ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಬರುತ್ತಾರೆ ಅಥವಾ ಇಲ್ಲವಾ ಎಂದು ಕೇಳಿದಾಗ ಮಾತ್ರ ಸುಧಾರಣೆಯಗಲು ಸಾಧ್ಯ. ಇಲ್ಲವೆಂದರೆ ಮತ್ತಷ್ಟು ಆಡಳಿತ ಅನ್ನೋದು ದಿವಾಳಿ ಯಾಗೋದು ಸತ್ಯ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

### ದಾಸೋಹ ರತ್ನ ದಾನೇಶ್ವರ ಶ್ರೀಗಳಿಗೆ ಕರ್ನಾಟಕ ಸುವರ್ಣ ಮಹೋತ್ಸವ ಪ್ರಶಸ್ತಿ

## ಭಕ್ತಿ, ದಾಸೋಹದ ಕೇಂದ್ರ ಬಂಡಿಗಣಿಮಠ

*** ಕಿರಣ ಶ್ರೀಶೈಲ ಆಳಗಿ**

**ರಬಕವಿ–ಬನಹಟ್ಟಿ** : ತಾಲೂಕಿನ ಬಂಡಿಗಣಿಯ ಶ್ರೀ ಬಸವಗೋಪಾಲ ನೀಲಮಾಣಿಕಮಠದ ಚಕ್ರವರ್ತಿ ದಾನೇಶ್ವರ ಶ್ರೀಗಳಿಗೆ ಸಮಾಜಸೇವೆ ವಿಭಾಗದಲ್ಲಿ ಕರ್ನಾಟಕ ಸುವರ್ಣ ಮಹೋತ್ಸವ ಸಾಧಕ ಪ್ರಶಸ್ತಿ ಲಭಿಸಿದೆ.

ಶ್ರೀಬಸವಗೋಪಾಲನೀಲಮಾಣಿಕಮಠವು ಭಕ್ತಿ, ಶ್ರದ್ಧೆಯ ಹಾಗೂ ದಾಸೋಹದ ಬೃಹತ್ ಕೇಂದ್ರವಾಗಿ ಬೆಳೆದು ನಿಂತಿದೆ. ದಾಸೋಹವನ್ನು ಮಾಡುವುದರ ಮೂಲಕ ಇಲ್ಲಿಯ ದಾನೇಶ್ವರ ಶ್ರೀಗಳು ಅನ್ನದಾನೇಶ್ವರರಾಗಿ ಪ್ರತಿಯೊಬ್ಬರ ಮನಗಳಲ್ಲೂ ತುಂಬಿಕೊಂಡಿದ್ದಾರೆ.

ಚಕ್ರವರ್ತಿ ದಾನೇಶ್ವರರು ಮೂಲತಃ ಅವರು ಬೆಳಗಾವಿಜಿಲ್ಲೆಯಅಥಣಿತಾಲ್ಲೂಕಿನಸವದಿ ಗ್ರಾಮದವರು. 19–09–1950 ರಂದು ಜನಿಸಿದ ಅವರು ಮುಂದೆ ತಮ್ಮ ಇಪ್ಪತ್ತನೇ ವಯಸ್ಸಿನಲ್ಲಿ (1970) ಬಂಡಿಗಣಿಗೆ ಬಂದು ಸ್ವತ: ದುಡಿದು ಬಸವಗೋಪಾಲ ಮಠ ಕಟ್ಟಿಸಿ ತಂದೆ ನಂದೇಶನ ಪೂಜೆ ಮಾಡುತ್ತಾ ಜೀವನ ನಡೆಸಿದರು.

1970ರಿಂದತಂದೆನಂದೇಶಶ್ರೀವೆಂಕಟೇಶ್ವರ ದಯದಿಂದ ಮೂಲ ಮಠ ಕ್ಷೇತ್ರಗಳಲ್ಲದೆ ಬಂಡಿಗಣಿಯಲ್ಲಿಸ್ವಂತಸ್ಥಳತೆಗೆದುಕೊಂಡು ಮಠವನ್ನು ಸ್ಥಾಪಿಸಿದರು. ಸತ್ಯವೇ ದೇವರು, ನೀತಿಯೇ ತಾಯಿ, ಬಂಧು ಬಳಗವೆಂದು ಹೇಳುತ್ತಾಬಂದ ಇವರ ಆಶ್ರಮಕ್ಕೆ ದಿನದಿಂದ ದಿನಕ್ಕೆ ಭಕ್ತವೃಂದ ಹೆಚ್ಚುತ್ತಾ ಹೋಯಿತು. ದಾಸೋಹ, ಸಪ್ತಾಹ ಮಾಡುವುದರಿಂದ ಆತ್ಮಕ್ಕೆ ಶಾಂತಿ ಅಷ್ಟೆ ಅಲ್ಲದೇ ಜಗತ್ತಿಗೆ ಶಾಂತಿ ಸಿಗುತ್ತದೆ. ಇದರಿಂದ ಎಲ್ಲಾ ಜೀವಾತ್ಮರಿಗೆ ಲೇಸಾಗಲೆಂದು ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ವಿವಿಧ ಧಾರ್ಮಿಕ ಕ್ಷೇತ್ರಗಳಲ್ಲಿ ಮಠದಿಂದಲೇ ಹಿಟ್ಟಕಿ, ಉಪ್ಪು




ಮತ್ತುಕಟ್ಟಿಗೆಹಿಡಿದುಎಲ್ಲಾಸಾಮಾನುಗಳನ್ನು ಪೂರೈಸಿ ಅನ್ನದಾಸೋಹವನ್ನು ಮಾಡುತ್ತಾ ಬಂದಿದ್ದಾರೆ.

ಮಠದ ಜಮೀನಿನಲ್ಲಿ ಬೆಳೆ ಬೆಳೆದು ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ, ಆಕಳು, ಎಮ್ಮೆ, ತರಕಾರಿಗಳ ವ್ಯಾಪಾರ ಮಾಡಿ ಬಂದ ಹಣವನ್ನು ದಾಸೋಹಕ್ಕೆ ತೊಡಗಿಸುತ್ತಾ ಬಂದಿರುವ ಶ್ರೀಗಳಿಗೆ, ಭಕ್ತರು ಜೀವನದಲ್ಲಿ ತಮಗೆ ರೋಗ, ರುಜಿನಗಳು ಹಾಗೂ ಸಂತಾನ ಫಲ ಬೇಕೆಂದು ಬೇಡಿಕೊಂಡು ಫಲ ದೊರೆತ ನಂತರ ಮಠಕ್ಕೆ ಬಂದು ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದಾರೆ. ಉತ್ತರ ಕರ್ನಾಟಕದಲ್ಲಿ ಇದೊಂದು ಬೃಹತ್ ಧರ್ಮಕ್ಷೇತ್ರವಾಗಿ ಬೆಳೆದು ನಿಂತಿದೆ.

ಪ್ರತಿ ಸೋಮವಾರ ಮಠದಲ್ಲಿ ಸುಮಾರು ಹತ್ತರಿಂದ ಹದಿನೈದು ಸಾವಿರ ಜನ ಭಕ್ತರು ಹಾಗೂ ಪ್ರತಿ ಅಮವಾಸ್ಯೆ ದಿನದಂದು ಇಪ್ಪತ್ತರಿಂದ ಮೂವತ್ತು ಸಾವಿರ ಜನ ಭಕ್ತರು ಸಪ್ತಾಹದಲ್ಲಿ ಭಾಗವಹಿಸಿ ತಮ್ಮ ಜೀವನದಲ್ಲಿ ಘಟಿಸಿದ ಅನುಭವಗಳನ್ನು ಮಠದಲ್ಲಿ ಹಂಚಿಕೊಳ್ಳುತ್ತಾರೆ. ಹಿಂದೆ ಹನ್ನೆರಡನೇ ಶತಮಾನದಲ್ಲಿ ಕಲ್ಯಾಣದಲ್ಲಿ ಅನುಭವ ನಡೆಯುತ್ತಿತ್ತು. ಅದೇ ರೀತಿ ಈ ಕಲಿಯುಗದ ಬಂಡಿಗಣಿಯಲ್ಲಿ ಅನುಭವ ನಡೆಯುತ್ತದೆ. ದಾನೇಶ್ವರರು ಭಕ್ತಿ–ಭಂಡಾರಿ ಬಸವಣ್ಣನವರ ಅವತಾರವೇ ಎಂದು ಪ್ರಖ್ಯಾತಿ ಹೊಂದಿದ್ದಾರೆ.

"ದಾಸೋಹ ರತ್ನ" : ಶ್ರೀ ಕ್ಷೇತ್ರ ಯಡೂರ ವೀರಭದ್ರೇಶ್ವರ ಜಾತ್ರಾ ಮಹೋತ್ಸವದಲ್ಲಿ ಚಕ್ರವರ್ತಿ ದಾನೇಶ್ವರರಿಗೆ 2013 ರಲ್ಲಿ ಶ್ರೀಶೈಲ ಕ್ಷೇತ್ರದ ಶ್ರೀಮತ್ ಗಿರಿರಾಜ ಸೂರ್ಯ ಸಿಂಹಾಸನಾಧೀಶ್ವರ ಶ್ರೀ 1008 ಡಾ॥ ಚನ್ನಸಿದ್ದರಾಮ ಪಾಂಡಿತ್ಯರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿಗಳು ದಾನೇಶ್ವರರಿಗೆ ದಾಸೋಹ ರತ್ನ ಎಂಬ ಪ್ರಶಸ್ತಿ ನೀಡಿ ಗೌರವಿಸಿದರು.

ಪ್ರತಿ ವರ್ಷ ಬಂಡಿಗಣಿಮಠದಿಂದ ಆಂಧ್ರಪ್ರದೇಶದ ಶ್ರೀಶೈಲ, ಮಹಾರಾಷ್ಟ್ರದ ಪಂಢರಪೂರ, ಹುಲಜಂತಿ, ಗುಡ್ಡಾಪೂರ, ತುಳಜಾಪೂರ, ಕೊಲ್ಲಾಪುರ ಸೇರಿದಂತೆ ಕರ್ನಾಟಕದ ಯಡೂರ, ಕೊಣ್ಣೂರ, ಮಾಚಕನೂರ, ಖಿಳೇಗಾಂವ, ಸೊಗಲ, ಎಲ್ಲಮ್ಮನಗುಡ್ಡ, ಚಿಂಚಲಿ, ಸಂಡೂರ, ಕಡಪಟ್ಟಿ,ಚಂದ್ರಗಿರಿಧರ್ಮಮಠಸೀತಿಮನಿ, ಕಟಗೇರಿ, ಶಿರಸಂಗಿ ಕೊಕಟನೂರ, ನಾವಲಗಿ,ಕುಲ್ಲಹಳ್ಳಿ,ಜಮಖಂಡಿ,ಕಟಗೇರಿ, ನಾವಲಗಿ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ದಾಸೋಹ ನೆರವೇರಿಸುತ್ತಾರೆ.

ಸಪ್ತಾಹಗಳು: ಸವದಿ, ಬೆಳಗಲಿ, ಹಳ್ಳೂರ, ಮುಧೋಳ, ಕೆಸರಗೊಪ್ಪ, ಮಧುರಖಂಡಿ, ಪಿ.ಜಿ.ಮಲ್ಲಾಪೂರ,ಅವರಾದಿ,ಅರಳಿಮಟ್ಟಿ, ಮೂಡಲಗಿ, ದುರದುಂಡಿ, ಅರಭಾಂವಿ, ಗುರ್ಲಾಪೂರ, ಅಥಣಿ, ಮದಭಾಂವಿ, ಪರಮಾನಂದವಾಡಿ, ಹಾಲಳ್ಳಿ, ಹೊನಕುಪ್ಪಿ, ಮುದ್ದೇನೂರ, ನಂದಗಾಂವ, ಬೊಂಬಲಾಡ, ಘಟಪ್ರಭಾ, ಇಟ್ನಾಳ, ಜಗದಾಳ, ಚಿಮ್ಮಡ, ಮಹಾಲಿಂಗಪೂರ ಜಮಖಂಡಿ, ಕಂಕಣವಾಡಿ, ಜನವಾಡ, ಖಾನಟ್ಟಿ, ಹಂದಿಗುಂದ, ಸಮೀರವಾಡಿ ಸೇರಿದಂತೆ ಇನ್ನೂ ಅನೇಕ ಸ್ಥಳಗಳಲ್ಲಿ ನಡೆಯುತ್ತದೆ.

ದಾಸೋಹದಲ್ಲಿ ಕೇವಲ ಅನ್ನ ಸಾಂಬಾರು ಮಾಡದೇ ಹುಗ್ಗಿ, ಜಿಲೇಬಿ, ಹೋಳಿಗೆ, ಕಡಬು, ಮುಂಬೈ ಮಾದಲಿ, ತುಪ್ಪ, ಶಾಂಡಿಗೆ, ಭಜಿ, ಪೂರಿ, ಚಪಾತಿ ಭಾಜಿ, ಬಿಳಿ ಮತ್ತು ಮಸಾಲಿ ಅನ್ನ, ಸಾಂಬಾರ, ತರಕಾರಿ ಸೇರಿದಂತೆ ಇನ್ನೂ ಅನೇಕ ತರಹದ ಪದಾರ್ಥಗಳನ್ನು ಮಾಡಿರುತ್ತಾರೆ. ಈ ದಾಸೋಹ ಕಾರ್ಯಕ್ಕೆ ಐದು ನೂರಕ್ಕೂ ಹೆಚ್ಚು ಜನ ಭಕ್ತರು ಭಾಗವಹಿಸುತ್ತಾರೆ. ಯಾವುದೇ ಜಾತ್ರೆ ಉತ್ಸವ ಇರಲಿ, ಕೇಳುವ ಭಕ್ತರಿಗೆ ಇಲ್ಲ ಎನ್ನದೇ ದಾಸೋಹದ ನೇತೃತ್ವ ವಹಿಸಿ ಆ ಸ್ಥಳಗಳಿಗೆ ತಾವೇ ಸ್ವತಃ ಹೋಗಿ ಅನ್ನ ಪ್ರಸಾದವನ್ನು ಹಂಚಿ ಬರುತ್ತಾರೆ.

ಪಾದಯಾತ್ರೆಗಳು: ರಾಜ್ಯದ ವಿವಿಧ ಸ್ಥಳಗಳಾದ ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನಿಂದ ಬಂಡಿಗಣಿ ಮಠಕ್ಕೆ ಪಾದಯಾತ್ರೆ, ರಾಮದುರ್ಗ ತಾಲ್ಲೂಕ ಕುನ್ನಾಳದಿಂದ ಬಂಡಿಗಣಿ ಮಠಕ್ಕೆ ಪಾದಯಾತ್ರೆ, ರಾಯಬಾಗ ತಾಲ್ಲೂಕ ಇಟ್ನಾಳದಿಂದ ಬಂಡಿಗಣಿ ಮಠಕ್ಕೆ ಪಾದಯಾತ್ರೆ ಮೂಲಕ ಸಾವಿರಾರು ಜನ ಆಗಮಿಸಿ ಸಪ್ತಾಹ ಕಾರ್ಯಕ್ರಮವನ್ನು ನಡೆಸುತ್ತಾರೆ.

ಜ್ಞಾನ, ದಾಸೋಹ, ಧಾರ್ಮಿಕ ಚಿಂತನಾ ಕೇಂದ್ರವಾಗಿರುವ ಬಂಡಿಗಣಿಯ ಮಠದ ದಾನೇಶ್ವರರಿಗೆ ರಾಜ್ಯೋತ್ಸವ ಪ್ರಶಸ್ತಿ ಲಭಿಸಿದ್ದು, ಈ ಭಾಗದ ಭಕ್ತರಿಗೆ ಸಂತಸವನ್ನುಂಟು ಮಾಡಿದೆ.

## ತಾಲೂಕ ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ರಾಜಶೇಖರ ಕಂಬಾರ ನೇಮಕ

**ಸಿಹಿ ಕಹಿ ಸುದ್ದಿ**

**ಸಿಂದಗಿ** : ಸಿಂದಗಿ ತಾಲೂಕ ದಲಿತ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾಗಿ ಶ್ರೀ ರಾಜಶೇಖರ ಕಂಬಾರ ನೇಮಕ ಗೊಂಡಿದ್ದಾರೆ. ತಾಲೂಕಿನ ಮೋರಟಗಿಯ ಶ್ರೀ ಸಿದ್ಧರಾಮೇಶ್ವರ ಕಲಾ ಪದವಿ ಮಹಾವಿದ್ಯಾಲಯದಲ್ಲಿ ಇತಿಹಾಸ ಉಪನ್ಯಾಸಕರಾದ ಶ್ರೀ ರಾಜಶೇಖರ ಕಂಬಾರ ಅವರ ಕ್ರಿಯಾಶೀಲತೆಯನ್ನು ಗುರುತಿಸಿ ತಾಲೂಕ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ದಲಿತ ಸಾಹಿತ್ಯ ಪರ ಚಟುವಟಿಕೆಗಳನ್ನು ಬಲ ವರ್ಧನೆ ಗೊಳಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಕೋರಿ ದಲಿತ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷರಾದ ಡಾ, ಬಸವರಾಜ ಸಾಲವಾಡಗಿ ಯವರು ನೇಮಕ ಗೊಳಿಸಿ ಸಂಘಟನೆಯನ್ನು ಉನ್ನತ ಮಟ್ಟದಲ್ಲಿ ಕೊಂಡೊಯ್ಯುವ ಜೊತೆಗೆ ಹೊಸ ಪ್ರತಿಭೆಗಳಿಗೆ ಪ್ರೋತ್ಸಾಹಿಸಲು ತಿಳಿಸಿದರು.



**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಭೀಮಪ್ಪ.ಹಚ್ಯಾಳ.ದೇವರ ಹಿಪ್ಪರಗಿ**

### ರೈತರ ಹಾಲಿನ ಪ್ರೋತ್ಸಾಹ ಹಣ ಬಿಡುಗಡೆಗೆ ಸರಕಾರಕ್ಕೆ ಆಗ್ರಹ

## ಅವಳಿ ಜಿಲ್ಲೆ ರೈತರ 22 ಕೋಟಿ ಹಣ ಬಾಕಿ

### ಕ್ರಮ ಕೈಗೊಳ್ಳದಿದ್ದರೆ ಬೀದಿಗಿಳಿದು ಪ್ರತಿಭಟನೆ–ಕೆಎಂಎಫ್ ನಿರ್ದೇಶಕ

**ತೇರದಾಳ** : ಕೆಎಂಎಫ್ ರೈತರು ನೀಡುವ ಹಾಲಿನ ಪ್ರೋತ್ಸಾಹ ಹಣವನ್ನು ಸರಕಾರ ಕೂಡಲೇ ಬಿಡುಗಡೆ ಮಾಡಬೇಕು. ಇಲ್ಲದಿದ್ದರೆ ಹಂತ ಹಂತವಾಗಿ ರಾಜ್ಯಾದ್ಯಂತ ರಾಜ್ಯ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಲಾಗುವುದು ಎಂದು ಕೆಎಂಎಫ್ ಅವಳಿ ಜಿಲ್ಲಾ ನಿರ್ದೇಶಕ ಲಕ್ಕಪ್ಪ ಪಾಟೀಲ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2023–24ನೇ ಸಾಲಿನಲ್ಲಿ 15 ಕೋಟಿಗೂ ಅಧಿಕ ಹಾಗೂ 2024–25ನೇ ಸಾಲಿನ ಜುಲೈ ವರೆಗಿನ 6 ಕೋಟಿಗೂ ಅಧಿಕ ರೈತರ ಪ್ರೋತ್ಸಾಹ ಹಣವನ್ನು ಸರಕಾರ ಬಿಡುಗಡೆ ಮಾಡಬೇಕಿದೆ. ಈ ಕುರಿತು ಕೆಎಂಎಫ್ ನಿರ್ದೇಶಕರು ಸರಕಾರದ ಗಮನಕ್ಕೆ ತಂದು ರೈತರ ಸಮಸ್ಯೆ ಕುರಿತು ಮನವರಿಕೆ ಮಾಡಿದರು ಇದುವರೆಗೆ ಬಾಕಿ ಹಣ ಬಿಡುಗಡೆ ಮಾಡಿಲ್ಲ. ಇದರಿಂದ ರೈತರ ಸ್ಥಿತಿ ಹೇಳತೀರದ್ದಾಗಿದೆ ಎಂದು ಸರಕಾರದ ವಿರುದ್ಧ ಕಿಡಿಕಾರಿದ್ದಾರೆ. ಬರೀ ಗ್ಯಾರಂಟಿ ಯೋಜನೆಗಳಿಗೆ ಅನುದಾನ ಒದಗಿಸುವಲ್ಲಿಯೇ ಹೈರಾಣ ಆಗುತ್ತಿರುವ ರಾಜ್ಯ ಕಾಂಗ್ರೆಸ್ ಸರಕಾರದಿಂದ ರೈತರಿಗೆ ನೇಕಾರರಿಗೆ ಯಾವುದೇ ಯೋಜನೆಗಳು ದೊರೆಯುತ್ತಿಲ್ಲ. ರೈತರ ಪ್ರೋತ್ಸಾಹ ಹಣ ಬಿಡಗಡೆ ವಿಷಯದಲ್ಲಿಯೂ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿಯಲ್ಲಿ ಸರಕಾರ ನಡೆದುಕೊಳ್ಳುವ ಮೂಲಕ ರೈತರ ನಡುವೆ ಇಬ್ಬುಗೆಯ ನೀತಿ ಅನುಸರಿಸುತ್ತಿದೆ ಎಂದು ಅಪಾದಿಸಿದ್ದಾರೆ. ಬರೀ ಹಗರಣಗಳಲ್ಲಿ ಮುಳಗಿರುವ ಕಾಂಗ್ರೆಸ್ ಸರಕಾರಕ್ಕೆ ಅಧಿಕಾರ ನಡೆಸುವ ನೈತಿಕತೆ ಉಳಿದಿಲ್ಲ. ರಾಜ್ಯದ ಮತದಾರರು ನೀಡಿದ ಅವಕಾಶವನ್ನು ದುರುಪಯೋಗ ಪಡಿಸಿಕೊಂಡು ರಾಜ್ಯವನ್ನು ದಿವಾಳಿ ಮಾಡುತ್ತಿದೆ. ರೈತರ ಪ್ರೋತ್ಸಾಹ ಹಣ ಬಾಕಿ ಕುರಿತು ಬಿಜೆಪಿ ವಿಜಯೇಂದ್ರ ಅವರ ಗಮನಕ್ಕೆ ತರಲಾಗುವುದು. ಶೀಘ್ರದಲ್ಲಿ ಶಾಸಕ ಸಿದ್ದು ಸವದಿ ನೇತೃತ್ವದಲ್ಲಿ ತೇರದಾಳ ಮತಕ್ಷೇತ್ರದಲ್ಲಿ ರೈತರ ಪ್ರೋತ್ಸಾಹ ಹಣ ಬಿಡುಗಡೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ನಿರ್ದೇಶಕ ಲಕ್ಕಪ್ಪ ಪಾಟೀಲ ತಿಳಿಸಿದ್ದಾರೆ.



## ಕೊಪ್ಪರ್ ಅಕಾಡೆಮಿಯಲ್ಲಿ ವಿಶ್ವ ಆಯುರ್ವೇದ ದಿನ ಆಚರಣೆ

**ಗದಗ** : ಧನ್ವಂತರಿ ಜಯಂತಿ ಅಂಗವಾಗಿ ಕೊಪ್ಪರ್ ಆಕಾಡೆಮಿಯಲ್ಲಿ ಅಕ್ಟೋಬರ್ 29, 2024 ರಂದು ವಿಶ್ವ ಆಯುರ್ವೇದ ದಿನ ಆಚರಿಸಲಾಯಿತು. ಆಯುರ್ವೇದದ ದೇವರು ಎಂದು ಪೂಜಿಸ್ಪಡುವ ಧನ್ವಂತರಿಯನ್ನು ಗೌರವಿಸಿ, ನಮಿಸಿ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರಘು ಕೊಪ್ಪರ್ "ಆಯುರ್ವೇದದಿಂದ ಎಂತಹ ರೋಗಗಳನ್ನು ನಾಶಪಡಿಸುವಂತ ಶಕ್ತಿ, ಸಾಮರ್ಥ್ಯ ಆಯುರ್ವೇದ ಹೊಂದಿದೆ. ನಮ್ಮ ತಂದೆ ರವೀಂದ್ರ ಕೊಪ್ಪರ್ ಸರ್ ಅವರು ಸಾವಿರಾರು ಜನರ ಕಾಮಾಲೆ ರೋಗವನ್ನು ಆಯುರ್ವೇದ ಔಷಧಿಯಿಂದಲೇ ಗುಣಪಡಿಸಿದ್ದಾರೆ. ನಮಗೆ ಹಲವು ರೋಗಗಳನ್ನು ಗುಣಪಡಿಸುವ ಔಷಧಿಗಳ ಬಗ್ಗೆಯೂ ತಿಳಿಸಿಕೊಟ್ಟಿದ್ದಾರೆ. ಅವರ ಮಾರ್ಗದರ್ಶನದಂತೆ ಬಡವರಿಗೆ, ಮಠದ ವಿದ್ಯಾರ್ಥಿಗಳಿಗೆ ಉಚಿತವಾಗಿ ಆಯುರ್ವೇದ ಔಷಧ ಇಂದಿಗೂ ಕೊಡುತ್ತಿದ್ದೇವೆ".

ಕಾರ್ಯಕ್ರಮದಲ್ಲಿ ಸುನೀಲಕುಮಾರ ಹಲಕುರ್ಕಿ, ಪ್ರವೀಣಕುಮಾರ್ ಹುರಳಿ, ರಮೇಶ ಬಮ್ಮನಗೌಡ್ರು, ದಯಾನಂದ ತಡಸ, ಕೊಪ್ಪರ್ ಅಕಾಡೆಮಿಯ ಅಧ್ಯಕ್ಷರಾದ ಹಾಗೂ ತೆರಿಗೆ ಸಲಹೆಗಾರರಾದ ಶ್ರೀಕಾಂತ್ ಕೊಪ್ಪರ್, ವಿಹಾನ ಕೊಪ್ಪರ್ ಉಪಸ್ಥಿತರಿದ್ದರು.



# ಡಾ. ಅಂಬೇಡ್ಕರ ಭವನ ನಿರ್ವಹಣೆ ಅಂಬೇಡ್ಕರ ಸೇವಾ ಸಮಿತಿಗೆ ವಹಿಸಲು ಒತ್ತಾಯಿಸಿ ಪ್ರತಿಭಟನೆ



**ಇಲಕಲ್ಲ :** ನಗರದ ಡಾ.ಬಿ.ಆರ್.ಅಂಬೇಡ್ಕರ ಭವನದ ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು ಡಾ.ಬಾಬಾಸಾಹೇಬ ಅಂಬೇಡ್ಕರ ಸೇವಾ ಸಮಿತಿ ಸಂಸ್ಥೆಗೆ ವಹಿಸಿಕೊಡುವಂತೆ ಒತ್ತಾಯಿಸಿ ಇಂದು ಇಲಕಲ್ಲ ನಗರದಲ್ಲಿ ನಗರಸಭೆ ಎದುರು ಪ್ರತಿಭಟನೆ ನಡೆಸಿ ಮನವಿಯೊಂದನ್ನು ಸಲ್ಲಿಸಲಾಯಿತು.

ಇಲಕಲ್ಲದಲ್ಲಿನ ಡಾ.ಬಿ.ಆರ್.ಅಂಬೇಡ್ಕರ ಭವನವನ್ನು ನಗರಸಭೆ ತನ್ನ ವಶಕ್ಕೆ ಪಡೆದುಕೊಂಡಿದ್ದನ್ನು ಖಂಡಿಸಿ ಇಂದು ಇಲಕಲ್ಲ ನಗರಸಭೆ ಎದುರು ದಲಿತ ಸಂಘಟನೆಗಳು ಹಾಗೂ ಬೌದ್ಧ ಬಿಕ್ಕು (ಭಂತೇಜಿ) ಅವರ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಬಾಗಲಕೋಟೆ ಉಪವಿಭಾಗ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಕಳೆದ 9 ವರ್ಷಗಳಿಂದ ಭವನದ ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು ಡಾ.ಬಾಬಾಸಾಹೇಬ ಅಂಬೇಡ್ಕರ ಸೇವಾ ಸಮಿತಿಯಿಂದ ನಡೆಸಿಕೊಂಡು ಬರಲಾಗುತ್ತಿತ್ತು. ಇತ್ತೀಚೆಗೆ ನಗರಸಭೆ ಪೌರಾಯುಕ್ತರು, ತಹಸೀಲ್ದಾರ ಹಾಗೂ ಪೋಲಿಸ್ ಅಧಿಕಾರಿಗಳೊಂದಿಗೆ ಯಾವುದೇ ರೀತಿಯ ಮುನ್ಸೂಚನೆ ನೀಡದೇ ಮತ್ತು ಕಾಲಾವಕಾಶ ನೀಡದೇ ತಮ್ಮ ವಶಕ್ಕೆ ಪಡೆದುಕೊಂಡಿರುವದನ್ನು ಖಂಡಿಸಿ ನಗರಸಭೆ ಮುಂದೆ ಬಾಬಾಸಾಹೇಬ ಅಂಬೇಡ್ಕರ್ ಸೇವಾ ಸಮಿತಿಯಿಂದ ಇಲಕಲ್ ನಗರಸಭೆಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸಿ ಈ ಹಿಂದಿನಂತೆ ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು ಸೇವಾ ಸಮಿತಿಗೆ ವಹಿಸಿಕೊಡಬೇಕೆಂದು ಒತ್ತಾಯಿಸಲಾಯಿತು.

ಪ್ರತಿಭಟನಾ ಸ್ಥಳಕ್ಕೆ ಉಪವಿಭಾಗಾಧಿಕಾರಿಗಳ ಭೇಟಿ ನೀಡಿ ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ ಮುಂದಿನ ಕ್ರಮ ಜರುಗಿಸುವದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ಶಾಣಪ್ಪ ಅಮದಿಹಾಳ ನಗರಸಭೆ ಸದಸ್ಯ ಶೋಭಾ ಅಮದಿಹಾಳ, ಮಂಜು ಹೊಸಮನಿ ಶರಣಪ್ಪ ಚಲವಾದಿ, ಬಾಗಲಕೋಟ ಜಿಲ್ಲಾ ಛಲವಾದಿ ಮಹಾಸಭಾದ ಪದಾಧಿಕಾರಿಗಳಾದ ಉಮಾಪತಿ ನೀಲನಾಯಕ, ಶ್ರೀಧರ ಚಿಕ್ಕಲಕಿ, ಜೈಭೀಮ, ಸಿದ್ಧರಾಜ ಸೊನ್ನದ, ನವೀನ ನೀಲನಾಯಕ, ಸಂಗಪ್ಪ ನಾರಾಯಣಿ, ಇತರರು ಇದ್ದರು.

# ವಿಕಲಚೇತನ-ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ವಿವಿಧ ಯೋಜನೆಯಡಿ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ವಿಜಯಪುರ :** ಜಿಲ್ಲಾ ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2024-25ನೇ ಸಾಲಿನ ಇಲಾಖೆ ಯೋಜನೆಗಳಾದ ಶುಲ್ಕ ಮರುಪಾವತಿ, ವಿವಾಹ ಪ್ರೋತ್ಸಾಹ ಧನ, ಬ್ಯಾಟರಿ ಚಾಲಿತ ವ್ಹೀಲ್ ಚೇರ್ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಿಂದ ಆಫಲೈನ್ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ದಿನಾಂಕ : 28-11-2024 ಕೊನೆಯ ದಿನವಾಗಿದ್ದು, ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ತಾಲೂಕಾ ಪಂಚಾಯತ್ ಕಾರ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ್ದೋದ್ದೇಶ ಪುನರ್ವಸತಿ ಕಾರ್ಯಕರ್ತರಾದ ವಿಜಯಪುರ ರವಿ ರಾಠೋಡ ಮೊ: 9003555337, ಇಂಡಿ ಪರಶುರಾಮ ಭೋಸಲೆ ಮೊ: 9972441464, ಸಿಂದಗಿ ಮುತ್ತುರಾಜ ಸಾತಿಹಾಳ ಮೊ: 9980019635, ಬಸವನಬಾಗೇವಾಡಿ ಎಸ್.ಡಿ.ಬಿರಾದಾರ ಮೊ: 8722135660 ಹಾಗೂ ಮುದ್ದೇಬಿಹಾಳ ಎಸ್. ಕೆ.ಘಾಟಿ ಮೊ: 9740682979 ಇವರನ್ನು ಹಾಗೂ ಕಚೇರಿ ದೂರವಾಣಿ : 08352-796060 ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿಗಳಾದ ಶ್ರೀಮತಿ ಸವಿತಾ ಕಾಳೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ವಿಜಯ ಮಹಾಂತೇಶ ಆಯುರ್ವೇದ ವೈದ್ಯಕೀಯ ಕಾಲೇಜಿ ಹಾಗೂ ಅರ್.ಪಿ. ಕರಡಿ ಆಯುರ್ವೇದ ಆಸ್ಪತ್ರೆಯಲ್ಲಿ ಧನ್ವಂತರಿ ಜಯಂತ್ಯೋತ್ಸವ

**ಇಳಕಲ್ :** ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಅಂಗ ಸಂಸ್ಥೆಗಳಲ್ಲಿ ಒಂದಾದ ಶ್ರೀ ವಿಜಯ ಮಹಾಂತೇಶ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಆರ್. ಪಿ. ಕರಡಿ ಆಯುರ್ವೇದ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದಲ್ಲಿ ಆಯುಷ ಸಚಿವಾಲಯ, ನವದೆಹಲಿಯವರ ನಿರ್ದೇಶನದ ಮೆರೆಗೆ 9ನೆಯ ರಾಷ್ಟ್ರೀಯ ಆಯುರ್ವೇದ ದಿವಸವನ್ನು ಜಾಗತಿಕ ಆರೋಗ್ಯಕ್ಕಾಗಿ ಹಾಗೂ ಮಹಿಳಾ ಸಬಲೀಕರಣಕ್ಕಾಗಿ ಆಯುರ್ವೇದ ಎಂಬ ಶಿರೊನಾಮೆಯೊಂದಿಗೆ ಶ್ರೀಗಳ ಆಶೀರ್ವಾದದಿಂದ ಧನ್ವಂತರಿ ಜಯಂತ್ಯೋತ್ಸವ ಆಚರಿಸಲಾಯಿತು.



ಅಧ್ಯಕ್ಷತೆಯನ್ನು ಸಂಘದ ಚೇರಮನ್ನ ಎಸ್. ಎಂ. ಗೊಂಗಡಶೆಟ್ಟಿ, ಪ್ರಧಾನ ಕಾರ್ಯದರ್ಶಿ ಡಿ. ಎನ್. ದೇವಗಿರಿಕರ, ಹಾಗೂ ಮಹಾವಿದ್ಯಾಲಯದ ಆಡಳಿತ ಮಂಡಳಿ ಚೇರಮನ್ನ ಎಂ. ಜಿ. ಪಟ್ಟಣಶೆಟ್ಟರ, ಆರ್.ಪಿ. ಕರಡಿ ಆಸ್ಪತ್ರೆ ಚೇರಮನ್ನ ಆರ್. ಆರ್. ಸೂಡಿ ಹಾಗೂ ಸಂಘದ ಪದಾಧಿಕಾರಿಗಳು ವಹಿಸಿದ್ದರು. ಮಹಾವಿದ್ಯಾಲಯ ಪ್ರಾಚಾರ್ಯ ಡಾ॥ ಕೆ.ಸಿ. ದಾಸ ಉಪಪ್ರಾಚಾರ್ಯ ಡಾ॥ ಪಿ. ಎಸ್. ತಾರಿವಾಳ, ಆಡಳಿತಾಧಿಕಾರಿ ಡಾ॥ ಸಿದ್ಧಲಿಂಗ ಮೂರ್ತಿ ಇವರುಗಳು ಉಪಸ್ಥತರಿದ್ದರು. ಇದೇ ಸಂದರ್ಭದಲ್ಲಿ ನಮ್ಮ ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿಜಿಯವರು ಲೈವ್ ಸ್ಟ್ರೀವ್‌ನಲ್ಲಿ ನಾಡಿನ ಜನತೆಗೆ ಧನ್ವಂತರಿ ಜಯಂತ್ಯೋತ್ಸವದ ಶುಭಾಶಯವನ್ನು ತಿಳಿಸುತ್ತಾ "ಪ್ರಾಚೀನ ವೈದ್ಯಕೀಯ ಪದ್ಧತಿಯು ಇಡಿ ಮಾನವ ಕುಲದ ಆರೋಗ್ಯಕರ ಜೀವನಕ್ಕೆ ಉಪಯುಕ್ತವಾಗಿದೆ" ಎಂದು ಹೇಳಿದರು. ನೋಡಲ್ ಅಧಿಕಾರಿ ಡಾ॥ ಶ್ರೀಮತಿ ಎಂ. ಪಿ. ಸರಗಣಾಚಾರಿಯವರು ಪ್ರಾಸ್ತಾವಿಕ ಮಾತನಾಡುತ್ತಾ, ಕಳೆದ ಒಂದು ಸಪ್ತಾಹದಿಂದ ಹಮ್ಮಿಕೊಳ್ಳಲಾದ ಕಾರ್ಯಕ್ರಮಗಳ ವರದಿಯನ್ನು ನೀಡದರು. ಈ ಕಾರ್ಯಕ್ರಗಳಲ್ಲಿ ನಮ್ಮ ಶಿಕ್ಷಕ ವೃಂದದವರು ಜಾಗತಿಕ ಆರೋಗ್ಯ ಹಾಗೂ ಮಹಿಳಾ ಸಬಲೀಕರಣ ಆರೋಗ್ಯ ಪ್ರಾಪ್ತಿ ಎಂಬುದರ ಅರಿವನ್ನು ನೀಡಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಆಯುರ್ವೇದ ಸ್ನಾತಕೋತ್ತರ ವಿದ್ಯಾರ್ಥಿಗಳು, ಯುವವೈದ್ಯರು, ಬೋಧಕ-ಬೋಧಕೇತರರು ಉಪಸ್ಥಿತರಿದ್ದರು.

# ದಲಿತರಿಂದಲೇ ದಲಿತರ ಮೇಲೆ ದೌರ್ಜನ್ಯ ಅನ್ಯಾಯ: ಸುರೇಶ ಜಂಗ್ಲಿ



**ಇಳಕಲ್ :** ನಗರಸಭೆಯಲ್ಲಿ ನೌಕರಿ ಮಾಡುವ ದಲಿತರ ವೇತನದಲ್ಲಿ ದಲಿತ ವ್ಯಕ್ತಿಯೇ ಕತ್ತರಿ ಹಾಕುವ ಇನ್ನಿತರ ಕಿರುಕುಳ ನೀಡುವ ಕಾರ್ಯವನ್ನು ಮಾಡುತ್ತಿರುವ ಮೂಲಕ ದಲಿತರೆ ದಲಿತರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ ಎಂದು ನಗರಸಭೆಯ ಸದಸ್ಯ ಸುರೇಶ ಜಂಗ್ಲಿ ಆಪಾದಿಸಿದರು.

ಕೇರಿಯಲ್ಲಿರುವ ಡಾ. ಅಂಬೇಡ್ಕರ್ ಭವನದಲ್ಲಿ ಸುದ್ದಿಗೋಷ್ಠಿಯನ್ನು ಕರೆದು ಮಾತನಾಡುತ್ತಾ ಜಿಲ್ಲಾಧಿಕಾರಿಗಳ ಆದೇಶದಂತೆ ನಗರಸಭೆ ಪೌರಾಯುಕ್ತರು, ತಹಶೀಲ್ದಾರರು ಡಾ.ಅಂಬೇಡ್ಕರ್ ಭವನವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಅಲ್ಲಿ ಯಾವುದೇ ದೌರ್ಜನ್ಯ ದಬ್ಬಾಳಿಕೆ ನಡೆದಿಲ್ಲ ಎಂದು ಸ್ಪಷ್ಟ ಪಡಿಸಿದರು. ಡಾ.ಬಾಬಾ ಸಾಹೇಬ ಅಂಬೇಡ್ಕರ್ ದಲಿತ ಹಿತರಕ್ಷಣ ವೇದಿಕೆ ಅಧ್ಯಕ್ಷ ಶರಣಪ್ಪ ಆಮದಿಹಾಳ ಮಾತನಾಡಿ ದಲಿತ ಬಾಂಧವರಿಗೆ ತಪ್ಪು ತಿಳುವಳಿಕೆ ಗೊಂದಲ ಮುಡಬಾರದು ಎಂಬ ದೃಷ್ಟಿಯನ್ನು ಇಟ್ಟುಕೊಂಡು ಸುದ್ದಿಗೋಷ್ಠಿಯನ್ನು ಕರಿದಿದ್ದೇವೆ ಎನ್ನುತ್ತಾ ಡಾ.ಅಂಬೇಡ್ಕರ್ ಭವನ ಮತ್ತು ಡಾ.ಜಗಜೀವನರಾಮ ಭವನದ ನಿರ್ವಹಣೆಯನ್ನು ನಾವು ಸರ್ಕಾರದ ಕಾನೂನು ಕಟ್ಟಳೆಯಲ್ಲಿ ನಿರ್ವಹಣೆ ಮಾಡುತ್ತೇವೆ ದಲಿತ ಹಿತರಕ್ಷಣಾ ವೇದಿಕೆಗೆ ಕೊಡುವಂತೆ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇವೆ ಎಂದರು. ಡಾ. ಅಂಬೇಡ್ಕರ್ ಭವನ ಕೇವಲ ಎರಡು ಕುಟುಂಬಕ್ಕೆ ಸಂಬಂಧಿಸಿದಲ್ಲ ಪ್ರತಿಯೊಬ್ಬ ದಲಿತರಿಗೂ ಸಂಬಂಧಿಸಿದ ಎನ್ನುತ್ತಾ ದಲಿತರಿಗೆ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡುವುದು ಕಾಂಗ್ರೆಸ್ ಸರ್ಕಾರ ಎನ್ನುತ್ತಾ ಒಳ ಮೀಸಲಾತಿ ರಚನೆ ಕುರಿತು ಸಚಿವ ಸಂಪುಟದಲ್ಲಿ ನಿರ್ಧಾರ ತೆಗೆದುಕೊಂಡು ಮೂರು ತಿಂಗಳಲ್ಲಿ ವರದಿ ತರಿಸಿಕೊಳ್ಳುವ ವ್ಯವಸ್ಥೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಚಿವ ಸಂಪುಟಕ್ಕೆ ಮತ್ತು ಕ್ಷೇತ್ರದ ಶಾಸಕ ವಿಜಯಾನಂದ ಎಸ್. ಕಾಶಪ್ಪನವರಿಗೆ ಅಭಿನಂದಗಳನ್ನು ಇದೆ ಸಂದರ್ಭದಲ್ಲಿ ಸಲ್ಲಿಸಿದರು ಸಂತೋಷ ರಾಮವಾಡಗಿ ಮಾತನಾಡಿದರು. ವೇದಿಕೆ ಉಪಾಧ್ಯಕ್ಷ ಯುವರಾಜ ಚಲವಾದಿ, ಭೀಮಣ್ಣ ಗೋನಾಳ, ಬಸಪ್ಪ ಮುಧೋಳ, ಯಮನಪ್ಪ ಬೀಳಗಿ, ವಸಂತ ಮುಧೋಳ, ಪ್ರವೀಣ ಹೊಳಿ, ರವಿ ಬೇಗಾರ, ಗೈಬು ಚಲವಾದಿ, ಎಚ್.ಎಮ್. ಹಗೇದಾಳ ಮೊದಲಾದವರು ಸುದ್ದಿಗೋಷ್ಠಿಯಲ್ಲಿದ್ದರು.

# ಜಗವೆಲ್ಲ ಮೊಳಗಲಿ ಕನ್ನಡದ ಕಹಳೆ

**ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು**
**ಬದುಕು ಬಲುಹೀನ ನಿಧಿಯ ಸದಭಿಮಾನದ ಗೂಡು॥**
**ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು**
**ಕಾವೇರಿ ಗೋದೆಯರ ಮೈದೊಳೆವ ನಲುನಾಡು**
**ಅವಗಂ ಸ್ಫೂರ್ತಿಸುವ ಕಬ್ಬಿಗರ ನಡೆಮಾಡು**
**ಕಾವ ಗದುಗಿನ ವೀರನಾರಾಯಣನ ಬೀಡು.**

ಗದುಗಿನ ಹುಯಿಲಗೋಳ ನಾರಾಯಣರಾವ್ ಅವರ ಈ ಕವನ ನಮ್ಮ ಕನ್ನಡಿಗರಿಗೆ ಸದಾ ಸ್ಫೂರ್ತಿ, ಚೈತನ್ಯ ತುಂಬುತ್ತಿದೆ. ಇದು ಕನ್ನಡ ಮೊದಲ ನಾಡಗೀತೆಯೆಂದು ಪ್ರಸಿದ್ಧವಾಗಿತ್ತು. ಕನ್ನಡ ನಾಡು ಉದಯವಾಗಬೇಕು, ಅಖಂಡ ಕರ್ನಾಟಕವು ಚೆಲುವು ಕಾಣಬೇಕು ನಾವೆಲ್ಲರೂ ನಾಡು ನುಡಿಯ ಬಗೆಗೆ ಹೆಮ್ಮೆ, ಅಭಿಮಾನ ಪಡಬೇಕಾಗಿದೆ. ನವ್ಹಂಬರ್ ತಿಂಗಳ ಬಂದರೆ ನಮಗೆಲ್ಲ ಸಂಭ್ರಮ, ಸಡಗರದ ಹಬ್ಬವಾಗಿದೆ. ನವ್ಹಂಬರ್ 1 ರಂದು ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತದೆ. ನವೆಂಬರ್ ತಿಂಗಳು ಪೂರ್ತಿ ಕನ್ನಡಕ್ಕೆ ಸಂಬಂಧಿಸಿದ ನಾಡಿನ ತುಂಬ ವಿವಿಧ ಕನ್ನಡ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕನ್ನಡಾಭಿಮಾನ ಮೆರೆಯಲಾಗುತ್ತದೆ. ಕನ್ನಡದ ಕಂಪು ಪಸರಿಸುವ ಈ ವಿಶೇಷ ದಿನದ ಸಂದರ್ಭದಲ್ಲಿ ಕನ್ನಡ, ಕನ್ನಡಿಗ, ಕರ್ನಾಟಕದ ಹಬ್ಬದ ಮಹತ್ವ ನಾವೆಲ್ಲರೂ ಅರಿತುಕೊಳ್ಳಬೇಕಾಗಿದೆ.

ಕರ್ನಾಟಕ ನಮ್ಮ ಹೆಮ್ಮೆಯ ರಾಜ್ಯ, ಕನ್ನಡ ನಮ್ಮ ಮಾತೃಭಾಷೆ. ಕನ್ನಡಾಂಬೆಯ ಮಕ್ಕಳಾದ ನಾವು ನವ್ಹಂಬರ್ 1 ರಂದು ಕನ್ನಡ ರಾಜ್ಯೋತ್ಸವ ಆಚರಿಸುವ ಮೂಲಕ ಕನ್ನಡಾಂಬೆಗೆ ಗೌರವ ಸಲ್ಲಿಸುವುದು ಮಾತ್ರವಲ್ಲ, ಕನ್ನಡದ ಭಾಷೆ, ಸಂಸ್ಕೃತಿ, ಪರಂಪರೆ, ಅಭಿಮಾನವನ್ನು ಮೆರೆಯುತ್ತೇವೆ. ರಾಜ್ಯಾದ್ಯಂತ ಶಾಲಾ  ಕಾಲೇಜುಗಳಲ್ಲಿ, ವಿವಿಧ ಸಮುದಾಯಗಳಲ್ಲಿ, ಸರ್ಕಾರಿ, ಖಾಸಗಿ ಕಚೇರಿಗಳಲ್ಲಿ, ಕನ್ನಡಪರ ಸಂಘ ಸಂಸ್ಥೆಗಳಲ್ಲಿ ಕನ್ನಡ ರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ.

ಕನ್ನಡ ರಾಜ್ಯೋತ್ಸವವನ್ನು ರಾಜ್ಯ ವಿವಿಧ ಪ್ರದೇಶಗಳಲ್ಲಿ ಒಂದು ತಿಂಗಳ ಕಾಲದವರೆಗೆ ಆಚರಿಸಲಾಗುತ್ತದೆ. ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಕೇಂದ್ರ, ಜಿಲ್ಲಾ, ತಾಲೂಕು, ಹೋಬಳಿ ಮತ್ತು ಗ್ರಾಮಗಳ ಮಟ್ಟದಲ್ಲಿ ವಿಭಿನ್ನವಾಗಿ, ವಿಶಿಷ್ಟವಾಗಿ ಕನ್ನಡ ರಾಜ್ಯೋತ್ಸವ ಆಚರಿಸುತ್ತಾರೆ. ಕರ್ನಾಟಕದ ಮೂಲೆ ಮೂಲೆಯಲ್ಲೂ ಕನ್ನಡ ರಾಜ್ಯೋತ್ಸವ ಎಂದರೆ ಹಬ್ಬದ ಸಂಭ್ರಮವಾಗಿದೆ.

**ಹಚ್ಚೇವು ಕನ್ನಡದ ದೀಪ**
**ಕರುನಾಡ ದೀಪ ಸಿರಿನುಡಿಯ ದೀಪ**
**ಒಲವೆತ್ತಿ ತೋರುವಾ ದೀಪ॥**
**ಬಹುದಿನಗಳಿಂದ ಮೈಮರೆವೆಯಿಂದ**
**ಕೂಡಿರುವ ಕೊಳೆಯ ಕೊಚ್ಚೇವು**
**ಎಲ್ಲೆಲ್ಲಿ ಕನ್ನಡದ ಕಂಪು ಸೂಸ-**
**ಲಲ್ಲಲ್ಲಿ ಕರಣ ಚಾಚೇವಲು . . . .**

ಡಿ.ಎಸ್.ಕರ್ಕಿ ಅವರ ಈ ಕವನ ನಮ್ಮ ಕನ್ನಡಿಗರ ಮನೆ ಮತ್ತು ಮನ ಸದಾ ಬೆಳಗುತ್ತಿದೆ.

**ಕರ್ನಾಟಕ ಏಕೀಕರಣ ಇತಿಹಾಸ:**

ನವ್ಹಂಬರ್ ತಿಂಗಳ ಬಂದರೆ ಸಾಕು ನಮ್ಮ ಕನ್ನಡ ನಾಡಿನಾದ್ಯಂತ ರಾಜ್ಯೋತ್ಸವದ ಸಂಭ್ರಮದ ವೈಭವ ಪ್ರಾರಂಭವಾಗುತ್ತದೆ. ಈ ದಿನದಂದು ಕರ್ನಾಟಕ ರಾಜ್ಯ ಉದಯವಾದ ದಿನವಾಗಿದೆ. ಕನ್ನಡಿಗರಿಗೆ ಕರ್ನಾಟಕ ಏಕೀಕರಣದ ಮಹತ್ವ ಕುರಿತು ತಿಳಿದುಕೊಳ್ಳುವ ದಿನವಾಗಿದೆ.

ಕನ್ನಡ ಭಾಷೆ, ಕನ್ನಡ ನೆಲದ ಬಗ್ಗೆ ನಮ್ಮೆಲ್ಲರಿಗೂ ಅಪಾರ ಹೆಮ್ಮೆ, ಅಭಿಮಾನ, ಭಕ್ತಿ. ಕನ್ನಡಾಂಬೆಯ ಮಕ್ಕಳಾದ ನಾವು ಕರ್ನಾಟಕದ ಹಿರಿಮೆಯನ್ನು ಎತ್ತಿ ಹಿಡಿದು ಸಂಭ್ರಮದೊಂದಿಗೆ ಮೆರೆಯುತ್ತೇವೆ. ಕನ್ನಡ ನಾಡು ಹಲವು ವೈವಿಧ್ಯತೆಗಳ ಬೀಡಾಗಿ, ಸಿರಿಗಂಧದ ನಾಡಾಗಿದೆ. ಇಲ್ಲಿನ ಪ್ರತಿಯೊಂದು ಅಂಶವು ನಮ್ಮಲ್ಲಿ ನಾಡಾಭಿಮಾನ, ರಾಷ್ಟ್ರಾಭಿಮಾನ ಉಕ್ಕುವಂತೆ ಮಾಡುತ್ತದೆ. ಇಂತಹ ಅದ್ಭುತವಾದ ಕನ್ನಡ ನಾಡು ಉದಯವಾಗಲು ಶ್ರಮಿಸಿದವರು ಅನೇಕರು. ಕನ್ನಡ ನಾಡನ್ನು ಏಕೀಕರಣ ಮಾಡಿದ ಕೀರ್ತಿ ಹಲವು ಕನ್ನಡ ಹೋರಾಟಗಾರರದ್ದಾಗಿದೆ.

ಕರ್ನಾಟಕ ಏಕೀಕರಣದ ನೆನಪುಗಳೊಂದಿಗೆ ಕನ್ನಡ ಭಾಷಿಗರ ನಾಡನ್ನು ಒಗ್ಗೂಡಿಸಬೇಕು ಎಂದು ಕನಸು ಕಂಡವರು ನೂರಾರು ಮಂದಿ. ಭಾರತ ಸ್ವಾತಂತ್ರ್ಯ ಹೋರಾಟಕ್ಕೂ ಮುನ್ನ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ನಡೆಸಲಾಗಿತ್ತು. ಈ ಹೋರಾಟದಲ್ಲಿ ಹಲವು ಚಳವಳಿಗಾರರು ಭಾಗವಹಿಸಿದ್ದರು. ಇವರೆಲ್ಲರೂ ಕನ್ನಡ ನಾಡು ಉದಯವಾಗಬೇಕು ಎಂದು ಒಮ್ಮನಸ್ಸಿನಿಂದ ಹೋರಾಡಿದ್ದರು. ಈ ಎಲ್ಲರ ಹೋರಾಟದ ಶ್ರಮದ ಫಲವಾಗಿ



1956, ನವೆಂಬರ್ 1ರಂದು ಮೈಸೂರು ರಾಜ್ಯ ಉದಯವಾಯಿತು. ಕನ್ನಡ ಭಾಷೆ ಮಾತನಾಡುವ ಜನರ ಪ್ರಾಂತ್ಯಗಳನ್ನು ಒಗ್ಗೂಡಿಸಿ ಒಂದು ರಾಜ್ಯವನ್ನಾಗಿ ಮಾಡಲಾಯಿತು. ಕನ್ನಡ ರಾಜ್ಯೋತ್ಸವದ ಈ ಹೊತ್ತಿನಲ್ಲಿ ಕರ್ನಾಟಕ ಏಕೀಕರಣದ ಕುರಿತು ವಿಚಾರಗಳು ಸ್ಮರಣೆ ಮಾಡಿಕೊಳ್ಳಬೇಕಾಗಿದೆ.

ಕರ್ನಾಟಕ ಏಕೀಕರಣ ಇತಿಹಾಸ

ಕರ್ನಾಟಕವು ಒಂದು ರಾಜ್ಯವಾಗಿ ರೂಪುಗೊಳ್ಳುವ ಮೊದಲು 4 ಪಾಂತ್ರ್ಯಗಳನ್ನು ಹೊಂದಿತ್ತು. ಮೈಸೂರು ಸಂಸ್ಥಾನ, ಮದ್ರಾಸ್ ಪ್ರಾಂತ್ಯ, ಬಾಂಬೆ ಪ್ರಾಂತ್ಯ, ಕೊಡಗು ಹೀಗೆ. ಈ ಭಾಗದಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಹೆಚ್ಚಿತ್ತು. ಈ ಎಲ್ಲರನ್ನೂ ಒಗ್ಗೂಡಿಸಿ ಒಂದು ಪ್ರತ್ಯೇಕ ರಾಜ್ಯ ಮಾಡಬೇಕು ಎಂದು 1856ರಲ್ಲಿ ಪ್ರತಿಭಟನೆಗಳು ಆರಂಭವಾಗಿದ್ದವು, ಆ ಕಾಲದಲ್ಲೇ ಪ್ರತ್ಯೇಕ ರಾಜ್ಯದ ಕೂಗು ಕೇಳಿದ್ದರೂ ಕರ್ನಾಟಕ ಏಕೀಕರಣ ಚಳವಳಿಗೆ ಒಂದು ರೂಪ ಕೊಟ್ಟವರು ಆಲೂರು ವೆಂಕಟರಾವ್ ಅವರು. 1890ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪನೆಯಾಗಿತ್ತು. ಆದರೂ ಚಳವಳಿ ತೀವ್ರ ಸ್ವರೂಪ ಪಡೆದಿದ್ದು ವೆಂಕಟರಾವ್ ಅವರ ಆಗಮನದ ನಂತರ. ಆಲೂರು ವೆಂಕಟರಾವ್ ಅವರು ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಪ್ರಮುಖರಾಗಿದ್ದರೂ, ಗುದ್ಲೆಪ್ಪ ಹಳ್ಳಿಕೇರಿ, ಸರ್ ಸಿದ್ದಪ್ಪ ಕಂಬಳಿ, ಆರ್.ಎಚ್.ದೇಶಪಾಂಡೆ, ರಂಗರಾವ್ ದಿವಾಕರ್, ಕೌಜಲಗಿ ಶ್ರೀನಿವಾಸರಾವ್, ಶ್ರೀನಿವಾಸ್ ರಾವ್ ಮಂಗಳವೇಢೆ, ಅಂದಾನೆಪ್ಪ ಜೆ.ದೊಡ್ಡಮೇಟಿ, ಕೆಂಗಲ್ ಹನುಮಂತಯ್ಯ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಚ್.ಮರಿಯಪ್ಪ ಸುಬ್ರಮಣಸ್ವಾಮಿ ಅಯ್ಯಂಗಾರ್, ಎಸ್.ನಿಜಯ್ಯಪ್ಪ, ಚೆನ್ನಯ್ಯ, ಟಿ. ವೀರನಗೌಡ, ಹೆಚ್.ಸಿ.ದಾಸಪ್ಪ, ಎಚ್.ಸಿದ್ದಯ್ಯ , ಕೆ.ಆರ್.ಕಾರಂತ್, ಬಿ.ಎಸ್.ಕಕ್ಕಿಲ್ಲಾಯ, ಬಿ.ವಿ.ಕಕ್ಕಿಲ್ಲಾಯ ಮತ್ತು ಅನಕೃ ಮೊದಲಾದವರು ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿ, ಕನ್ನಡ ಭಾಷಿಗರ ರಾಜ್ಯ ಕರ್ನಾಟಕವಾಗಿ ರೂಪಗೊಳ್ಳಲು ಶ್ರಮಿಸಿದರು.

1924 ರಲ್ಲಿ ಎನ್ಐಸಿಯ ಹೊಸದಾಗಿ ರಚನೆಯಾದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧೀನದಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಮಹಾತ್ಮ ಗಾಂಧಿಯವರು ಈ ಐತಿಹಾಸಿಕ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಈ ಸಮಾವೇಶದಲ್ಲಿ ಎಲ್ಲ ಭಾಗದ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಇದೇ ವೇದಿಕೆಯಲ್ಲಿ ಮೊದಲ ಕರ್ನಾಟಕ ಏಕೀಕರಣ ಸಮ್ಮೇಳನವನ್ನೂ ಆಯೋಜಿಸಲಾಗಿತ್ತು. ಸರ್ ಸಿದ್ದಪ್ಪ ಕಂಬಳಿ ಅಧ್ಯಕ್ಷತೆ ವಹಿಸಿದ್ದರು. ಇದರಲ್ಲಿ ಕರ್ನಾಟಕದ ಪ್ರಮುಖರು, ಲೇಖಕರು, ಕವಿಗಳು ಮತ್ತು ಬುದ್ಧಿಜೀವಿಗಳು ಗಣನೀಯ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಹುಯಿಲಗೋಳ ನಾರಾಯಣರಾವ್ ಅವರು ತಮ್ಮ ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು ಎಂಬ ಹಾಡನ್ನು ಮೊದಲು ಹಾಡಲಾಯಿತು.

ಏಕೀಕರಣಕ್ಕೆ ಸಾಹಿತಿಗಳು, ಕವಿಗಳ ಬೆಂಬಲ ಕರ್ನಾಟಕ ಏಕೀಕರಣ ಸಭೆಯು ನಂತರ ಕರ್ನಾಟಕ ಏಕೀಕರಣ ಸಂಘ ಎಂದು ಕರೆಯಲ್ಪಟ್ಟಿತು. ನಂತರ ಕುವೆಂಪು , ಬೇಂದ್ರೆ , ಗೋಕಾಕ , ಎಸ್‌ಬಿ ಜೋಶಿ, ಬೆಟಗೇರಿ ಕೃಷ್ಣಶರ್ಮ, ಎಂ ಗೋವಿಂದ ಪೈ, ಶಿವರಾಮ ಕಾರಂತರು ಮತ್ತು ಕಯ್ಯಾರ ಕಿಯ್ಯಣ್ಣ ರೈ ಅವರಂತಹ ಸಾಹಿತಿಗಳಿಂದ ಬೆಂಬಲ ದೊರೆಯಿತು. ಪತ್ರಿಕೆಗಳು ಮತ್ತು ಮಾಧ್ಯಮಗಳಿಂದ ವ್ಯಾಪಕ ಬೆಂಬಲವೂ ದೊರೆಯಿತು.

ಜನವರಿ 1953 ರಲ್ಲಿ, ಹೈದರಾಬಾದ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ, ಆಂಧ್ರಪ್ರದೇಶದ ರಚನೆಯ ಪರವಾಗಿ ನಿರ್ಣಯವನ್ನು ಅಂಗೀಕರಿಸಲಾಯಿತು. ಆದರೆ ಕರ್ನಾಟಕಕ್ಕೆ ಪ್ರತ್ಯೇಕ ರಾಜ್ಯ ಬೇಕು ಎಂಬುದನ್ನು ಅಂಗೀಕಾರ ಮಾಡಿರಲಿಲ್ಲ. ಹಿರಿಯ ಕಾಂಗ್ರೆಸ್ ನಾಯಕ ಮತ್ತು ಬಾಂಬೆ ವಿಧಾನಸಭಾ ಸದಸ್ಯರಾದ ಅಂದಾನೆಪ್ಪ ಜೆ.ದೊಡ್ಡಮೇಟಿ ಅವರು ತಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಅಂದಿನ ಧಾರವಾಡ ಜಿಲ್ಲೆಯ ಗದಗ ಹತ್ತಿರದ ಜಕ್ಕಲಿ ಗ್ರಾಮದಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಇದಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಗಿತ್ತು. ನಂತರ ಹುಬ್ಬಳ್ಳಿಯಲ್ಲಿ ನಡೆದ ಗಲಭೆಯಲ್ಲಿ ಹಲವರು ಗಾಯಗೊಂಡರು ಮತ್ತು ಹಲವರನ್ನು ಬಂಧಿಸಲಾಯಿತು.

ಹೋರಾಟಗಾರರ ಶ್ರಮದ ಫಲವಾಗಿ ಮೈಸೂರು ರಾಜ್ಯ ಅಂದರೆ ಇಂದಿನ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿ ಮಾಡಲು ಅಂಗೀಕರಿಸಲಾಯಿತು. ಕೊನೆಗೂ 1956ರಲ್ಲಿ ಕನ್ನಡ ಮಾತನಾಡುವವರ ಕರ್ನಾಟಕ ರಾಜ್ಯ ಉದಯವಾಗುತ್ತದೆ. 1 ನವೆಂಬರ್ 1973 ರಂದು, ದೇವರಾಜ್ ಅರಸು ಮುಖ್ಯಮಂತ್ರಿಯಾಗಿದ್ದಾಗ ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು. ಅಂದಿನಿಂದ ಇಂದಿನವರೆಗೂ ಪ್ರತಿ ವರ್ಷ ನವ್ಹಂಬರ್ 1 ರಂದು ರಾಜ್ಯೋತ್ಸವ ಆಚರಿಸುವ ಮೂಲಕ ಜಗವೆಲ್ಲ ಮೊಳಗುತ್ತಿದೆ ನಮ್ಮ ಕನ್ನಡದ ಕಹಳೆ.

* * *

**ಸಂಗ್ರಹ:**
**ಡಾ.ಚಂದ್ರಶೇಖರ ಕಾಳನ್ನವರ**
**ರೈತರು ಮತ್ತು ಉಪನ್ಯಾಸಕರು.**
**ತೆಗ್ಗಿ, ಗುಳೇದಗುಡ್ಡ, ಬಾಗಲಕೋಟೆ**

# ಜಾಗೃತಿ ಅರಿವು ಸಪ್ತಾಹ

**ಧಾರವಾಡ :** ಇಂದು ಎಲ್ಲೆಡೆ ಭ್ರಷ್ಟಾಚಾರದ ಮಾತು ಕೇಳಿ ಬರುತ್ತಿದೆ. ಇದು ಸಮಾಜಕ್ಕೆ ಅಂಟಿದ ಪಿಡುಗು. ಇದನ್ನು ತೊಡೆದು ಹಾಕಲು ನಿಸ್ವಾರ್ಥ ಸೇವೆ, ನಿಸ್ವಾರ್ಥ ಜೀವನ ನಮ್ಮದಾಗಬೇಕು ಎಂದು ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶೆ ಬಿ.ಜಿ.ರಮಾ ಅವರು ಹೇಳಿದರು.

ಅವರು ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಸಭಾಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಪಂಚಾಯತ, ಪೊಲೀಸ್ ಇಲಾಖೆ ಹಾಗೂ ಕರ್ನಾಟಕ ಲೋಕಾಯುಕ್ತ ಧಾರವಾಡ ಇವರು ಸಂಯುಕ್ತವಾಗಿ ಆಯೋಜಿಸಿದ್ದ ಜಾಗೃತಿ ಅರಿವು ಸಪ್ತಾಹ-2024 ನ್ನು ಉದ್ಘಾಟಿಸಿ, ಮಾತನಾಡಿದರು.

ಭ್ರಷ್ಟಾಚಾರವು ನಿರಂತರ ಸೇವೆ ಪ್ರಾಮಾಣಿಕತೆಯನ್ನು ತಿಂದು ಹಾಕುತ್ತದೆ. ಸಮಾಜ ಕಲುಷಿತಗೊಂಡರೆ, ವ್ಯವಸ್ಥೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಪ್ರತಿಯೊಬ್ಬರು ಪಾರದರ್ಶಕವಾಗಿ ಮತ್ತು ಆತ್ಮಸಾಕ್ಷಿಯಿಂದ ತಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ನಿರ್ವಹಿಸಬೇಕು ಎಂದು ಅವರು ಹೇಳಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ.ಗೋಪಾಲ ಬ್ಯಾಕೋಡ ಅವರು ಮಾತನಾಡಿ, ಅತಿ ಆಸೆ ಪಡದೆ, ಬಂದಿರುವ ಪಾಲನ್ನು ಅನುಭವಿಸಬೇಕು. ಪ್ರತಿಯೊಬ್ಬರಿಗೆ ಕೆಲಸದಲ್ಲಿ ತೃಪ್ತಿ, ಉತ್ತಮ ಆರೋಗ್ಯ ಮುಖ್ಯ. ಸದ್ಭಾವನೆಯಿಂದ ಕರ್ತವ್ಯ ನಿರ್ವಹಿಸಿದರೆ ಬದುಕು ಸುಂದರವಾಗಿರುತ್ತದೆ ಎಂದು ತಿಳಿಸಿದರು.




ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಮಾತನಾಡಿ, ಪ್ರತಿ ಸರಕಾರಿ ನೌಕರರಲ್ಲಿ ಕರ್ತವ್ಯ ಪ್ರಜ್ಞೆ, ಪ್ರಾಮಾಣಿಕತೆ ಮತ್ತು ಮಾನವೀಯತೆ ಇದ್ದಾಗ ಯಾವ ಸಮಸ್ಯೆಗಳು ಬರುವುದಿಲ್ಲ. ಮತ್ತು ಬೇರೆಯವರಿಗೆ ತೊಂದರೆಯೂ ಆಗುವುದಿಲ್ಲ ಎಂದು ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿ.ಕಾ.ಸೇ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪರಶುರಾಮ ಎಫ್.ದೊಡ್ಡಮನಿ, ಉಪ ಪೊಲೀಸ್ ಆಯುಕ್ತ ಮಾನಿಂಗ ನಂದಗಾವಿ, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ ಅವರು ವೇದಿಕೆಯಲ್ಲಿ ಇದ್ದರು.

ಕರ್ನಾಟಕ ಲೋಕಾಯುಕ್ತ ಜಿಲ್ಲಾ ಪೊಲೀಸ್ ಅಧೀಕ್ಷಕ ಹುನಮಂತರಾಯ ಅವರು ಸ್ವಾಗತಿಸಿ, ಮಾತನಾಡಿ, ಜಿಲ್ಲೆಯಲ್ಲಿ ಜಾಗೃತಿ ಅರಿವು-2024 ರ ಅಡಿ ಇಂದಿನಿಂದ ಒಂದು ವಾರದ ಕಾಲ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಜನರಲ್ಲಿ ಜಾಗೃತ ದಳದ ಕಾರ್ಯಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ ಎಂದು ಹೇಳಿದರು.

ಪ್ರಧಾನ ಜಿಲ್ಲಾ ನ್ಯಾಯಾಧೀಶೆ ಬಿ.ಜಿ.ರಮಾ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳಿಗೆ, ಸಾರ್ವಜನಿಕರಿಗೆ ಭ್ರಷ್ಟಾಚಾರ ನಿಯಂತ್ರಣದ ಬಗ್ಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಕಾರ್ಯಕ್ರಮವನ್ನು ಅಲಿ ಮಹಮ್ಮದ ತಹಶೀಲ್ದಾರ ಅವರು ನಿರೂಪಿಸಿದರು. ಹಿರಿಯ ನ್ಯಾಯವಾದಿ ಸೋಮಶೇಖರ ಜಾಡರ ವಂದಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಮುತಗಿ ಗ್ರಾಮದ ಸಾರ್ವಜನಿಕರಲ್ಲಿ ಉಂಟಾಗಿದ್ದ ವಾಂತಿ ಬೇಧಿ ಪ್ರಕರಣ: ಡಿಎಚ್‌ಓ ಡಾ. ಶಶಿ ತಂಡ ಭೇಟಿ

**ಧಾರವಾಡ :** ಕಲಘಟಗಿ ತಾಲೂಕಿನ ಮುತಗಿ ಗ್ರಾಮದಲ್ಲಿನ ಮೂರು ಓಣಿಗಳಲ್ಲಿ ಸರಬರಾಜು ಆಗಿದ್ದ ಕಲುಷಿತ ನೀರು ಸೇವನೆಯಿಂದ ಸಾರ್ವಜನಿಕರಲ್ಲಿ ಉಂಟಾಗಿದ್ದ ವಾಂತಿ ಬೇಧಿ ಪ್ರಕರಣಗಳು ನಿಯಂತ್ರಣಕ್ಕೆ ಬಂದಿದ್ದು ಇಂದು ( ಅ.26) ಸಂಜೆ 22 ಜನ ಗ್ರಾಮಸ್ಥರು ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದಾರೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರನ್ನು ಪ್ರತ್ಯೇಕ ಟ್ಯಾಂಕರ ಮೂಲಕ ಸರಬರಾಜು ಮಾಡಲಾಗುತ್ತಿದೆ. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಶಿ ಪಾಟೀಲ ನೇತೃತ್ವದಲ್ಲಿ ಗ್ರಾಮದ ಮನೆಮನೆಗೆ ಆರೋಗ್ಯ ತಂಡ ಭೇಟಿ ನೀಡಿ ಆರೋಗ್ಯ ಕಾರ್ಯಕರ್ತರು ಹಾಗೂ ಆಶಾ ಕಾರ್ಯಕರ್ತೆಯರು ಆರೋಗ್ಯ ಸಮೀಕ್ಷೆ ಮಾಡುತ್ತಿದ್ದಾರೆ. ಮತ್ತು ಜನರಲ್ಲಿ ನೈರ್ಮಲ್ಯತೆ ಸ್ವಚ್ಛತೆ ಮತ್ತು ಶುದ್ಧ ಕುಡಿಯುವ ನೀರಿನ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ವಾಂತಿ ಬೇಧಿ ಪ್ರಕರಣಗಳು ದಾಖಲಾದ ದಿನದಿಂದಲೂ ಕಟ್ಟೆಚ್ಚರವಹಿಸಲಾಗಿದೆ. 5 ಜನ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು, 3 ಜನ ಆರೋಗ್ಯ ನೀರೀಕ್ಷಣಾಧಿಕಾರಿಗಳು, 3 ಜನ ಸಮುದಾಯ ಆರೋಗ್ಯ ಅಧಿಕಾರಿಗಳು, 6 ಜನ ಆಶಾ ಕಾರ್ಯಕರ್ತೆಯರನ್ನು ಮತ್ತು ಆರಿ??ಬ.ಎಸ್.ಕೆ ವೈದ್ಯಧಿಕಾರಿಗಳು ಹಾಗೂ 2 ಜನ ಶುಶ್ರೂಷಕ ಅಧಿಕಾರಿಗಳನ್ನು ಒಳಗೊಂಡಿರುವ



ತಂಡವನ್ನು ರಚಿಸಿ, ದಿನದ 24 ಗಂಟೆಗಳ ಕಾಲ ಕಾರ್ಯನಿರ್ವಾಹಿಸುವಂತೆ ನಿರ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ. ಕಲಘಟಗಿ ತಾಲೂಕು ಆಸ್ಪತ್ರೆಯಲ್ಲಿ ಮುಖ್ಯ ವೈದ್ಯಾಧಿಕಾರಿ ಡಾ.ಯಶವಂತ ಮದಿನಕರ ಉಸ್ತುವಾರಿಯಲ್ಲಿ, ಒಳರೋಗಿಗಳ ಚಿಕಿತ್ಸೆಗಾಗಿ ವೈದ್ಯರು ಮತ್ತು ಶುಶ್ರೂಷಕ ಅಧಿಕಾರಿಗಳು ದಿನದ 3 ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ತಾಲ್ಲೂಕು ಆಸ್ಪತ್ರೆಗಳ ಹೆಚ್ಚುವರಿ ಚಿಕಿತ್ಸೆಗಾಗಿ ಎರಡು ಆಂಬುಲೆನ್ಸ್ ವಾಹನಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳನ್ನು ತಾಲೂಕು ಆಸ್ಪತ್ರೆಯಲ್ಲಿ ರಾತ್ರಿಯ ಸಮಯದಲ್ಲಿಯೂ ಕರ್ತವ್ಯವಂತೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಮುತಗಿ ಗ್ರಾಮದ ಪ್ರಕರಣ-ಕ್ಕೆ ಸಂಬಂದಿಸಿದಂತೆ ಗ್ರಾಮದ ಎಲ್ಲ ವಯೋವೃದ್ದರ, ಗರ್ಭಿಣಿಯರ, ಮಕ್ಕಳ ಮತ್ತು ಅಧಿಕ ರಕ್ತದೊತ್ತಡ ಇರುವ ರೋಗಿಗಳಿಗೆ ವಿಶೇಷ ಕಾಳಜಿ ವಹಿಸಕು ಆದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.

ಇಂದು 22 ಜನ ಆಸ್ಪತ್ರೆಯಿಂದ ಡಿಸ್ಚಾರ್ಜ, 38 ಜನರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಕೆ ವಾಂತಿ ಬೇಧಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಘಟಗಿ ತಾಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮುತಗಿ ಗ್ರಾಮದ 22 ಜನರು ಇಂದು ಸಂಜೆ ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದಾರೆ.

ಈಗ ಕಲಘಟಗಿ ತಾಲೂಕು ಆಸ್ಪತ್ರೆಯಲ್ಲಿ 38 ಜನರಿಗೆ ಮತ್ತು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ 13 ಜನರಿಗೆ ಚಿಕಿತ್ಸೆ ಮುಂದುವರಿಸಲಾಗಿದೆ. ಆಸ್ಪತ್ರೆಗಳಲ್ಲಿರುವವರ ಆರೋಗ್ಯ ಸುಧಾರಣೆ ಆಗಿದ್ದು ಯಾವುದೇ ಆತಂಕ ಪಡುವ ಅಗತ್ಯವಿಲ್ಲ. ವೈದ್ಯರು ಉತ್ತಮ ಚಿಕಿತ್ಸೆ ಅಗತ್ಯ ಓಷಧಿಗಳನ್ನು ನಿಯಮಿತವಾಗಿ ಕೊಡುತ್ತಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವರ ನಿರ್ದೇಶನದಂತೆ ಜಿಲ್ಲಾಡಳಿತವು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಂಡಿದೆ ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಧಾರವಾಡ ಕೃಷಿ ವಿವಿ ಕೊಡುಗೆ ಅನನ್ಯ: ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಮಹಿಳೆಯರ ಸಬಲೀಕರಣಕ್ಕೆ ಒತ್ತು

**ಧಾರವಾಡ :** ಕೃಷಿ ವಿಶ್ವವಿದ್ಯಾಲಯದ ಸಮುದಾಯ ವಿಜ್ಞಾನ ಮಹಾವಿದ್ಯಾಲಯ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಸಮಾಜಕ್ಕೆ ಉತ್ತಮ ಕೊಡುಗೆ ನೀಡಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯದ ರೈತರ ಜ್ಞಾನಭಿವೃದ್ಧಿ ಕೇಂದ್ರದಲ್ಲಿ ಶನಿವಾರ ನಡೆದ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಸುವರ್ಣ ಮಹೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಆನ್‌ಲೈನ್ ಮೂಲಕ ಪಾಲ್ಗೊಂಡು ಮಾತನಾಡಿದ ಸಚಿವರು, ಮಹಿಳೆಯರಿಗಾಗಿಯೇ ಆರಂಭಗೊಂಡ ಕಾಲೇಜು ಮಹಿಳೆಯರ ಅಭಿವೃದ್ಧಿಗೆ ನೀಡಿದ ಸೇವೆಯನ್ನು ಶ್ಲಾಘಿಸಿದರು.

ನಮ್ಮೆಲ್ಲರ ನಾಯಕ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಸರ್ಕಾರ ಮಹಿಳೆಯರ ಅಭಿವೃದ್ಧಿಗಾಗಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಇಡೀ ರಾಷ್ಟ್ರಕ್ಕೆ ಮಾದರಿಯಾದಂತಹ ಮಹಿಳಾ ಪರ ಯೋಜನೆಗಳು ಕರ್ನಾಟಕದಲ್ಲಿವೆ ಎಂದು ಸಚಿವರು ಹೇಳಿದರು. 50 ವರ್ಷ ಹಿಂದೆಯೇ ಈ ಕಾಲೇಜನ್ನು ಕಟ್ಟಲಾಗಿದೆ. ಧಾರವಾಡ ಎಂದರೆ ಉತ್ತರ ಕರ್ನಾಟಕದ ಹೆಬ್ಬಾಗಿಲು, ವಿದ್ಯಾ ಕಾಶಿ ಅಂತಾನೆ ಕರೆಯಲಾಗುತ್ತದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯ ನಮ್ಮೆಲ್ಲರ ಹೆಮ್ಮೆ. ಈ ರಾಷ್ಟ್ರಕ್ಕೆ ಶೈಕ್ಷಣಿಕ ಸೇವೆ ನೀಡುವಲ್ಲಿ ಧಾರವಾಡದ ಪಾತ್ರ ಅನನ್ಯ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಸ್ಮರಿಸಿದರು.

ಧಾರವಾಡದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ ಕೂಡ ರಾಜ್ಯದಲ್ಲೇ ಅಗ್ರಗಣ್ಯ ಕೃಷಿ ವಿಶ್ವವಿದ್ಯಾಲಯ ಎನ್ನುವ ಹೆಮ್ಮೆಯನ್ನು ಇಂದಿಗೂ ಉಳಿಸಿಕೊಂಡಿದೆ. ಕೃಷಿ ರಾಷ್ಟ್ರದ ಬೆನ್ನೆಲುಬು ಎಂದು ಹೇಳುತ್ತೇವೆ. ಶೇ.70ರಷ್ಟು ಜನರು ಕೃಷಿಯನ್ನೇ ತಮ್ಮ ಜೀವನಾಧಾರವಾಗಿ ಅವಲಂಭಿಸಿದ್ದಾರೆ. ಅಂತಹ, ಕೃಷಿಯಲ್ಲಿ ತೊಡಗಿರುವ ರೈತರ ಬೆನ್ನೆಲುಬು ನಮ್ಮ ಧಾರವಾಡದ ಕೃಷಿ ವಿಜ್ಞಾನ ವಿಶ್ವವಿದ್ಯಾಲಯ. ವಿಶೇಷವಾಗಿ, ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆ ಕ್ಷೇತ್ರದಲ್ಲಿ ಗಣನೀಯ ಸೇವೆಯನ್ನು ನೀಡುತ್ತಿದೆ ಎಂದರು. ಮಹಾವಿದ್ಯಾಲಯ 50 ವರ್ಷ ಯಶಸ್ವಿಯಾಗಿ ಪೂರೈಸಿದ ಹಿನ್ನೆಲೆಯಲ್ಲಿ ಈವರೆಗೆ ಸೇವೆ ಸಲ್ಲಿಸಿದ ಎಲ್ಲ ಪ್ರಾಚಾರ್ಯರನ್ನು, ಶಿಕ್ಷಕರನ್ನು ಹಾಗೂ ಸಿಬ್ಬಂದಿಯನ್ನು ನಾನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡು, ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

# ಡಿಎಸ್‌ಎಸ್(ಕೆಂಪು ಸೇನೆ) ಜಿಲ್ಲಾ ಸಮಿತಿ ರಚನೆ

**ಹುಬ್ಬಳ್ಳಿ :** ದಲಿತ ಸಂಘರ್ಷ ಸಮಿತಿ(ಕೆಂಪುಸೇನೆ) ವತಿಯಿಂದ ಧಾರವಾಡ ಜಿಲ್ಲಾ ಸಮಿತಿಯನ್ನು ಅ. 27ರಂದು ರವಿವಾರ ರಚನೆ ಮಾಡಲಾಯಿತು.

ಉತ್ತರ ಕರ್ನಾಟಕ ಅಧ್ಯಕ್ಷ ವಿ.ಬಿ. ರಾಮಚಂದ್ರ ಉದ್ಘಾಟಿಸಿದರು. ಮಂಜುನಾಥ್ ಹಿರೇಮನಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಲಹೆಗಾರ ಮಂಜುನಾಥ್ ಮಲ್ಲಪ್ಪ ಕಟ್ಟಿ, ಉಪಾಧ್ಯಕ್ಷ ಹನುಮಂತ ನಾಗಪ್ಪ ತಳವಾರ, ನವೀನ್ ಎಚ್.ಟಿ.ಎನ್ ಇದ್ದರು.

ಧಾರವಾಡ ಜಿಲ್ಲಾ ಉಪಾಧ್ಯಕ್ಷರಾಗಿ ಸುರೇಶ್ ಮಾದರ್, ಮಹಿಳಾ ಅಧ್ಯಕ್ಷೆಯಾಘಿ ಜಯಶ್ರೀ, ಯುವ ಘಟಕದ ಅಧ್ಯಕ್ಷರಾಗಿ ಅಭಿಲಾಶ್ ವೀರಣ್ಣ ಮಂದಳ್ಳಿ, ಉಪಾಧ್ಯಕ್ಷರಾಗಿ ವೀರೇಶ್ ಪ್ರಕಾಶ್ ಉತ್ತನಹಳ್ಳಿ, ಕಾರ್ಯದರ್ಶಿಯಾಗಿ ಬಸನಗೌಡ ಪಾಟೀಲ, ಕಿತ್ತೂರು ತಾಲೂಕಾ ಅಧ್ಯಕ್ಷರಾಗಿ ವಿಜಯ್ ಬಂಡಿವಡ್ಡರ್, ಉಪಾಧ್ಯಕ್ಷರಾಗಿ ವಿನೋದ್ ವಡ್ಡರ್, ಪ್ರಧಾನ ಕಾರ್ಯದರ್ಶಿಯಾಗಿ ಕಿರಣ್ ಹುಬ್ಬಳ್ಳಿ ಕಾರ್ಯದರ್ಶಿಯಾಗಿ ಮಂಜುನಾಥ್ ಕಲ್ಲುಡರ್, ಸದಸ್ಯರಾಗಿ



ನಾಗೇಶ್ ಕಲ್ಡರ್, ಬಾಗಲಕೋಟಿ ಜಿಲ್ಲಾಧ್ಯಕ್ಷರಾಗಿ ಬಸವರಾಜ ಆನೆಗುಂದಿ, ಕಾರ್ಯದರ್ಶಿಯಾಗಿ ಹನುಮಂತ್ ಸಿದ್ದಪ್ಪ ಕೆರೆವನ್ನವರ್, ಸದಸ್ಯರಾಗಿ ಹೊಳೆಪ್ಪ ಬಾಳಪ್ಪ ನಾಯಕ್, ವಿಜಯಕುಮಾರ್ ತಿಪ್ಪಣ್ಣ ಗಾಳಿ ಅವರನ್ನು ನೇಮಕ ಮಾಡಲಾಯಿತು.

ಈ ಸಂದರ್ಭದಲ್ಲಿ ಗಣೇಶಂಬೋಳಿ, ಮೀನಾಕ್ಷಿ ಮಾದರ್, ಲಕ್ಷ್ಮಣ್ ಸೇರಿದಂತೆ ಅನೇಕರಿದ್ದರು. ರಘು ದೊಡ್ಡಮನಿ ಸ್ವಾಗತಿಸಿದರು. ಬಸವರಾಜ್ ವಡ್ಡರ್ ನಿರೂಪಿಸಿದರು.

# ಜಿಲ್ಲೆಯಲ್ಲಿ ರೈತರ ಒಂದಿಷ್ಟೂ ಜಮೀನು ವಕ್ಫ್‌ಗೆ ಸೇರಿಸಿಲ್ಲ: ಸಚಿವ ಎಂ.ಬಿ. ಪಾಟೀಲ

**ವಿಜಯಪುರ :** ಜಿಲ್ಲೆಯ ವಕ್ಫ್ ಆಸ್ತಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಟಾಸ್ಕ್‌ಪೋರ್ಸ ಸಮಿತಿಯೊಂದನ್ನು ರಚಿಸಿ, 1964 ರಿಂದ 1974 ರವರೆಗಿನ ದಾಖಲೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ವಹಿಸುವಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಖಾತೆ ಸಚಿವ, ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಬಿ.ಪಾಟೀಲ ಸೂಚಿಸಿದರು.



ನಗರದ ಸೊಲ್ಲಾಪುರ ರಸ್ತೆಯಲ್ಲಿರುವ ಸಚಿವರ ಗೃಹ ಕಚೇರಿಯಲ್ಲಿ ಜಿಲ್ಲೆಯ ವಿವಿಧ ತಹಶೀಲ್ದಾರರು, ವಕ್ಫ್ ಅಧಿಕಾರಿಗಳು ಸೇರಿದಂತೆ ವಿವಿಧ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ವಿಜಯಪುರ ಜಿಲ್ಲೆಯಾದ್ಯಂತ ರೈತರು ಸೇರಿದಂತೆ ಖಾಸಗಿ ಜಮೀನುಗಳ ಪೈಕಿ ಒಂದು ಎಕರೆಯೂ ಸಹ ವಕ್ಫ್‌ಗೆ ಸೇರಿಸಿಲ್ಲ. 1974ರ ಗೆಜೆಟ್ ನೋಟಿಫಿಕೇಶನ್ ಪ್ರಕಾರ ವಕ್ಫ್ ಆಸ್ತಿ ಮಾತ್ರ ಕ್ರಮಬದ್ಧ ಮಾಡಲಾಗುತ್ತಿದ್ದು, ಈ ಕುರಿತು ಅನಾವಶ್ಯಕವಾಗಿ ಗೊಂದಲ ಸೃಷ್ಟಿಸಲಾಗುತ್ತಿದೆ. ಎಲ್ಲ ಗೊಂದಲಕ್ಕೆ ಅಂತ್ಯ ಹಾಡಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಟಾಸ್ಕ್ ಸಮಿತಿ ರಚಿಸಿಕೊಂಡು 1964 ರಿಂದ 1974 ರವರೆಗಿನ ದಾಖಲೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.

1974ರಲ್ಲಿ ಹೊರಡಿಸಲಾದ ಗೆಜೆಟ್ ನೋಟಿಫಿಕೇಶನ್‌ನಲ್ಲಿ ನಗರದಲ್ಲಿರುವ ಖಾಜಾ ಅಮೀನ ದರ್ಗಾ ಸರ್ವೆ ನಂಬರ್ ಹೊನವಾಡ ಗ್ರಾಮದ ಆಸ್ತಿ ಎಂದು ನಮೂದಾಗಿರುವುದರಿಂದ ವಕ್ಫ್ ಮಂಡಳಿಯಿಂದ 1977ರಲ್ಲಿ ಮತ್ತೆ ಬದಲಾವಣೆ ಮಾಡಿ ಸರಿಪಡಿಸಿದೆ. ಹೊನವಾಡ ಗ್ರಾಮದ ಯಾರಿಗೂ ನೋಟಿಸ್ ಈವರೆಗೆ ಜಾರಿ ಮಾಡಿರುವುದಿಲ್ಲ, ಸಂಬಂಧಿಸಿದ ರೈತರ-ಮಾಲೀಕರ ಹೆಸರಿನಲ್ಲಿಯೇ ಜಮೀನುಗಳು ಇವೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿ-ದಾಗ ಗೆಜೆಟ್ ನೋಟಿಫಿಕೇಶನ್‌ಗಿಂತ ಮುಂಚಿತವಾಗಿ 1964 ರಿಂದ 1974 ರವರೆಗಿನ ದಾಖಲೆಗಳನ್ನು ಪರಿಶೀಲಿಸಿ ಸರಿಪಡಿಸಿ ಕ್ರಮ ವಹಿಸುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಕಳೆದ ಒಂದು ತಿಂಗಳಿಂದ ಈವರೆಗೆ ಮಾತ್ರ 124 ನೋಟಿಸ್ ನೀಡಲಾಗಿದೆ. ಇಂಡಿ ತಾಲೂಕಿಗೆ ಸಂಬಂಧಿಸಿದಂತೆ ತಹಶೀಲ್ದಾರರು ನೋಟಿಸ್ ನೀಡದೆ-ಯೇ 41 ಆಸ್ತಿಗಳ ಕ್ರಮಬದ್ಧತೆ ಕುರಿತು ಉಪವಿಭಾಗಾಧಿಕಾರಿಗಳು ಸುಮೋಟೋ ಪ್ರಕರಣವೆಂದು ಪರಿಗಣಿಸಿ ಅಗತ್ಯ ಕ್ರಮ ವಹಿಸಬೇಕು. ಸಿಂದಗಿಯ ವಿರಕ್ತಮಠದ ಆಸ್ತಿ ಸರ್ವೆ ನಂ.1029 ಬದಲಿಗೆ 1020 ಆಗಿದ್ದು, ಈ ಕುರಿತು ಅಗತ್ಯ ಕ್ರಮ ವಹಿಸಿ ಸರಿಪಡಿಸುವಂತೆ ಅವರು ಸೂಚನೆ ನೀಡಿದರು.

ಯಾರೂ ತಮ್ಮ ಆಸ್ತಿ- ಜಮೀನುಗಳ ಬಗ್ಗೆ ಆತಂಕ ಪಡುವ ಅವಶ್ಯಕತೆ ಇಲ್ಲ. ವಕ್ಫ್ ಇಲಾಖೆಯ ಆಸ್ತಿಗಳ ಕ್ರಮಬದ್ಧತೆ ಮಾತ್ರ ಮಾಡಲಾಗುತ್ತಿರುವ ಕುರಿತು ಜನರಲ್ಲಿ ತಿಳುವಳಿಕೆ ಮೂಡಿಸುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿ-ದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಟಿ. ಭೂಬಾಲನ್, ವಿಜಯಪುರ ಉಪ ವಿಭಾಗಾಧಿಕಾರಿ ಗುರುನಾಥ ದಡ್ಡೆ, ಇಂಡಿ ಉಪವಿಭಾಗಾಧಿಕಾರಿ ಆಬೀದ ಗದ್ಯಾಳ, ವಿಜಯಪುರ ತಹಶೀಲ್ದಾರ ಪ್ರಶಾಂತ ಚನಗೊಂಡ, ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ವಕ್ಫ್ ಇಲಾಖೆ ಅಧಿಕಾರಿ ತಬಸ್ಸುಮ್ ಎಂ. ಮೊಹಸೀನ್ ಜಮಖಂಡಿ ಸೇರಿದಂತೆ

# ಅಂಬೇಡ್ಕರ್ ಭವನ ನಿರ್ವಹಣೆ ದಲಿತ ಹಿತರಕ್ಷಣಾ ವೇದಿಕೆಗೆ ಕೊಡುವಂತೆ ಮನವಿ



**ಇಳಕಲ್ :** ನಗರದ ನಗರಸಭೆ ಹತ್ತಿರವಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ನಿರ್ವಹಣೆಗಾಗಿ ತಮ್ಮ ಸುಪರ್ದಿಗೆ ನೀಡುವಂತೆ ಡಾ.ಬಾಬಾ ಸಾಹೇಬ ಅಂಬೇಡ್ಕರ್ ದಲಿತ ಹಿತರಕ್ಷಣಾ ವೇದಿಕೆ ನಗರಸಭೆಯ ಪೌರಾಯುಕ್ತರಿಗೆ ಮನವಿ ಸಲ್ಲಿಸಿದರು.

ಬುಧವಾರ ನಗರಸಭೆಗೆ ಆಗಮಿಸಿದ ಡಾ.ಬಾಬಾ ಸಾಹೇಬ ಅಂಬೇಡ್ಕರ್ ದಲಿತ ಹಿತರಕ್ಷಣಾ ವೇದಿಕೆ ಅಧ್ಯಕ್ಷರು ,ಸದಸ್ಯರು ಪೌರಾಯುಕ್ತರಿಗೆ ಮನವಿ ಸಲ್ಲಿಸಿದರು ಇದೇ ವೇಳೆಯಲ್ಲಿ ಡಾ.ಬಾಬು ಜಗಜೀವನರಾಮ್ ಅಭಿವೃದ್ಧಿ ಸೇವಾ ಸಂಸ್ಥೆಯ ಅಧ್ಯಕ್ಷರು, ಸದಸ್ಯರು ನಗರದ ಕಂದಗಲ್ಲಗೆ ಹೋಗವು ರಸ್ತೆಯಲ್ಲಿರು ಡಾ.ಬಾಬು ಜಗಜೀವನರಾಮ್ ಭವನವನ್ನು ನಮ್ಮ ಸಂಸ್ಥೆಗೆ ನಿರ್ವಹಣೆಗಾಗಿ ನೀಡಿ ಎಂದು ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ದಲಿತ ಹಿತರಕ್ಷಣಾ ವೇದಿಕೆಯ ಅಧ್ಯಕ್ಷ ಶರಣಪ್ಪ ಆಮದಿಹಾಳ ಉಪಾಧ್ಯಕ್ಷ ಯುವರಾಜ್ ಚಲವಾದಿ, ನಗರಸಭೆ ಸದಸ್ಯರಾದ ಸುರೇಶ ಜಂಗ್ಲಿ, ಎಚ್. ಎಮ್. ಹಾಗ್ಗೆದಾಳ, ಸಂತೋಷ್ ರಾಮವಾಡಗಿ, ಆನಂದ ತುಂಬಿದ, ಕಿರಣ ಹೂಸಮನಿ, ದುರಗಪ್ಪ ದೋಡ್ಡಮನಿ, ಭೀಮಣ್ಣ ಗೋನಾಳ, ಸಂಗಮೇಶ ಜಂಗ್ಲಿ ,ಯಮನಪ್ಪ ಬೀಳಗಿ, ದೀಲಿಪ್ ಕಲ್ಮನಿ, ಗೈಬು ಚಲವಾದಿ ,ರವಿ ಬೇಗಾರ, ಪ್ರವೀಣ ಹೋಳಿ, ಸಿದ್ಧಾರ್ಥ ಚಲವಾದಿ, ಪ್ರಶಾಂತ ಚಲವಾದಿ ಇತರರು ಭಾಗವಹಿಸಿದ್ದರು.

# ಬದುಕಿನ ಸಾಮರಸ್ಯದ ಕವಿ ಬೇಂದ್ರೆ: ಡಾ. ಭಾರತಿ ಖಾಸನೀಸ್

**ವಿಜಯಪುರ :** ಕನ್ನಡ ಸಾಹಿತ್ಯದ ಸುದೀರ್ಘ ಇತಿಹಾಸದಲ್ಲಿ ಸರಳ ಬದುಕಿನ ಸಾರ ಕವನ ಸಂಕಲನಗಳ ಮೂಲಕ ಹೇಳಿದ ಮಹಾನ ವ್ಯಕ್ತಿತ್ವ ಬೇಂದ್ರೆಯವರು ಹೊಂದಿದ್ದರು. ಕವನಗಳನ್ನು ಅಧ್ಯಯನ ಮಾಡುವ ಅತ್ಯವಶ್ಯಕತೆ ಇದೆ. ಅವರನ್ನು ನೆನಸುವದೇ ಒಂದು ಸಾರ್ಥಕ ಬದುಕು ಆಗಿದೆ. ಬೇಂದ್ರೆ ಬದುಕಿನುದ್ದಕ್ಕೂ ನಡೆ ನುಡಿ ಒಂದಾಗಿ ಬದುಕಿದವರು, ಇಡೀ ಬದುಕಿನ ಸಾಮರಸ್ಯ ಕವಿಯಾಗಿ ಹೊರಹೊಮ್ಮಿದವರು ಎಂದು ಜೆಎಸ್‌ಎಸ್ ಶಿಕ್ಷಣ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ. ಭಾರತಿ ಖಾಸನೀಸ್ ಅವರು ಹೇಳಿದರು.

ಶನಿವಾರ ಜೆ ಎಸ್ ಎಸ್ ಶಿಕ್ಷಣ ಮಹಾವಿದ್ಯಾಲಯ, ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ವಿಜಯಪುರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಡಾ. ದ.ರಾ. ಬೇಂದ್ರೆ ಪುಣ್ಯ ಸ್ಮರಣೋತ್ಸವ ನಿಮಿತ್ತ ಚಿಂತನೆ ಗೋಷ್ಠಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಬೇಂದ್ರೆ ಕವನಗಳನ್ನು ಅಧ್ಯಯನ ಮಾಡುವ ಅತ್ಯವಶ್ಯಕತೆ ಇದೆ, ಸಾಹಿತ್ಯ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ ಎಂದರು,




ಕಾರ್ಯಕ್ರಮಲ್ಲಿ ಡಾ. ದ.ರಾ. ಬೇಂದ್ರೆ ಕುರಿತು ಉಪನ್ಯಾಸ ನೀಡಿದ ಪಿಡಿಜೆ ಕಾಲೇಜ್ ಉಪನ್ಯಾಸಕ ಸಂತೋಷ ಕುಲಕರ್ಣಿ,

ಕನ್ನಡ ಸಾಹಿತ್ಯಕ್ಕೆ ನಾಕುತಂತಿ ಕವನ ಸಂಕಲನ ನೀಡುವದರ ಮೂಲಕ ಜ್ಞಾನಪೀಠ ಪ್ರಶಸ್ತಿ ಪಡೆದು ನಾಡಿಗೆ ಗೌರವ ತಂದವರು. ಕಷ್ಟದಲ್ಲಿ ನೋವುಂಡು ಬೆಳದು 37 ಕವನ ಸಂಕಲನ ಬರೆಯುವದರ ಮೂಲಕ ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿದರು. ಅನೇಕ ಕವನಗಳು ಪಠ್ಯಕ್ರಮದಲ್ಲಿ ಅಳವಡಿಸಲಾಗಿದೆ. ವರಕವಿ ಎಂದು ಬಿರುದು ಹೊಂದಿದ ಬೇಂದ್ರೆಯವರು ಸೊಲ್ಲಾಪುರ, ಸಾಂಗಲಿ, ಪುಣೆ, ಶಿರಹಟ್ಟಿ, ಮುಂಬೈ ಹೀಗೆ ಹಲವಾರು ಪಟ್ಟಣಗಳಲ್ಲಿ ಜೀವನ ಸಾಗಿಸಿ ಕನ್ನಡ ಬೆಳಸಿದವರು. ಎಂದರು.

ಕಸಾಪ ಕೋಶಾಧ್ಯಕ್ಷ ಡಾ. ಸಂಗಮೇಶ ಮೇತ್ರಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಡಾ. ಬೇಂದ್ರೆ ಅವರು ಸರಳ ಬದುಕು ಸಾಗಿಸುವದರ ಜೊತೆ ಬದುಕಿನ ಸರಳ ತಿರುಳು, ನಾದಲೀಲೆ, ಸಖೀಗೀತೆ ಕವನ ಸಂಕಲನಗಳ ಮೂಲಕ ಹೇಳಿದ್ದಾರೆ, ಸಾಹಿತ್ಯ ಎಲ್ಲ ಹಂತದಲ್ಲಿಯೂ ಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹಾಸಿಂಪೀರ ವಾಲೀಕಾರ ಮಾತನಾಡಿ, ಕಡುಬಡತನದಲ್ಲಿ ಡಾ. ದ.ರಾ. ಬೇಂದ್ರೆ ಸಾಹಿತ್ಯ ಅತ್ಯಂತ ಶ್ರೇಷ್ಠವಾಗಿದೆ. ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಬೇಂದ್ರೆಯವರಿಗೆ ಕರ್ನಾಟಕ ವಿಶ್ವವಿದ್ಯಾಲಯ, ಕಾಶಿ ವಿದ್ಯಾಪೀಠ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದರು. ಭಾರತ ಸರಕಾರ ಬೇಂದ್ರೆಯವರಿಗೆ ಪದ್ಮಶ್ರೀ ಪ್ರಶಸ್ತಿ ಕೊಡಮಾಡಿದ್ದಾರೆ. ಇದು ನಮ್ಮ ಕನ್ನಡಕ್ಕೆ ಸಂದ ಗೌರವ ಎಂದರು.

ಇದೇ ಸಂದರ್ಭದಲ್ಲಿ ಸಂತೋಷ ಕುಲಕರ್ಣಿ ಬರೆದ “ಮಾತು ಮಥಿಸಿದ ಮಹಾಕವಿ” ದ.ರಾ. ಬೇಂದ್ರೆ ಕುರಿತು ವಿಮರ್ಶಾತ್ಮಕ ಗ್ರಂಥ ಬಿಡುಗಡೆ ಮಾಡಲಾಯಿತು.

ಡಾ. ಮಳಿಸ್ವಾಮಿ ಹಿರೇಮಠ, ಡಾ. ಮಂಜುನಾಥ ಕೋರಿ, ಡಾ. ಜ್ಯೋತಿ ಪಟ್ಟಣಶೆಟ್ಟಿ, ಡಾ.ಬಸವರಾಜ ಹಿರೇಮಠ, ಸುನೀಲ ಪಾಟೀಲ, ಪೀರಸಾಬ ಮುಲ್ತಾನಿ, ಅಣ್ಣಾರಾಯ ಮಸಳಿ, ಡಾ. ಶಿವಾನಂದ ಶೇಗುಣಸಿ ಉಪಸ್ಥಿತರಿದ್ದರು.

ಅರುಣ ಚವ್ಹಾಣ ಸ್ವಾಗತಿಸಿದರು. ಭಾಗ್ಯಶ್ರೀ ಕೋಟ್ಯಾಳ ನಿರೂಪಿಸಿದರು. ಸುಷ್ಮಾ ಸಿದ್ದಾಪುರ ವಂದಿಸಿದರು.

# ಕಾಂತರಾಜ ಜಾತಿಗಣತಿ ವರದಿ ಜಾರಿಗೆ ಆಗ್ರಹಿಸಿ ಅಹಿಂದ ವರ್ಗದ ಸಭೆ



**ವಿಜಯಪುರ :** ಕಾಂತರಾಜ ಜಾತಿ ಗಣತಿ ವರದಿ ಬಿಡುಗಡೆ ಮಾಡಬೇಕು ಎಂದು ಅಹಿಂದ ಮುಖಂಡರು ಒತ್ತಾಯಿಸಿದರು.

ಭಾನುವಾರ ನಗರದ ಸಾರಿಪುತ್ರ ಬೌದ್ಧ ವಿಹಾರದಲ್ಲಿ ಸಭೆ ಸೇರಿದ ಜಿಲ್ಲೆಯ ಅಹಿಂದ ವರ್ಗದ ಮುಖಂಡರು, ಕಾಂತರಾಜ ಅವರ ಜಾತಿಗಣತಿ ವರದಿಯ ಮಹತ್ವ ಮತ್ತು ಅದರ ಅವಶ್ಯಕತೆ ಬಗ್ಗೆ ಚೆರ್ಚೆ ಮಾಡಲಾಯಿತು. ಜಾತಿಜನಗಣತಿ ಬಹಿರಂಗ ಮಾಡದಂತೆ ಸಿದ್ದರಾಮಯ್ಯ ಮತ್ತು ಸರ್ಕಾರದ ಮೇಲೆ ಕೆಲವರು ಒತ್ತಡ ಹೇರುತ್ತಿದ್ದಾರೆ. ವರದಿ ಬಹಿರಂಗ ಮಾಡುವುದನ್ನು ತಡೆಯುವ ಷಡ್ಯಂತ್ರ ಮಾಡುತ್ತಿರುವ ಶಕ್ತಿಗಳನ್ನು ತಡೆಯಬೇಕಾದರೆ ಅಹಿಂದ ವರ್ಗದ ಶೇ.80ರಷ್ಟು ಜನ ಒಂದಾಗಬೇಕು ಮತ್ತು ಅವರನ್ನು ಜಾಗೃತಿ ಮಾಡಬೇಕು ಎಂದರು.

ಮುಂದಿನ ದಿನಗಳಲ್ಲಿ ಜಿಲ್ಲೆಯ ಪ್ರತಿ ತಾಲ್ಲೂಕಿನಲ್ಲಿ ಮುಖಂಡರು ಸಂಚರಿಸಿ ಜನರನ್ನು ಜಾಗೃತಿ ಮಾಡಿ ದೂಡ್ಡ ಹೋರಾಟ ಮಾಡಲು ನಿರ್ಧರಿಸಲಾಯಿತು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಬಟಗಿ ಮಾತನಾಡಿ, ಅಹಿಂದ ವರ್ಗದ ಮೇಲೆ ನಿಜವಾದ ಕಾಳಜಿ ಇದ್ದರೆ ಸಿದ್ದರಾಮಯ್ಯನವರು ಕೂಡಲೆ ಮೀಸಲಾತಿ ತಂದು ಸರ್ಕಾರದ ಶಾಲೆಯಲ್ಲಿ ಕಲಿತವರಿಗೆ ಉದ್ಯೋಗದಲ್ಲಿ ಶೇ.50ರಷ್ಟು ಮೀಸಲು ತರಲಿ ಎಂದರು.

ಸಭೆಯಲ್ಲಿ ರಾಜಶೇಖರ ಯಡಹಳ್ಳಿ, ಪ್ರಭುಗೌಡ ಪಾಟೀಲ, ಚೆನ್ನು ಕಟ್ಟಿಮನಿ, ಮಹಾದೇವ ಬನಸೂಡೆ, ಮಂಜುಳಾ ಪೂಜಾರಿ, ಬಸವರಾಜ ಸೂಳೆಬಾವಿ, ಬಿ.ಎಸ್.ಗಸ್ತಿ, ದೇವಾನಂದ ಲಚ್ಯಾಣ, ದಸ್ತಗಿರಿ ಮುಲ್ಲಾ ಹಾಗೂ ಇನ್ನೂ ಅನೇಕ ಅಹಿಂದ ಮುಖಂಡರು ಉಪಸ್ಥಿತರಿದ್ದರು.

# ಶೆರೆ ಮನುಷ್ಯನ ಆಯುಷ್ಯ ಕಡಿಮೆ ಮಾಡುತ್ತದೆ: ಅಮೃತಾನಂದ ಶ್ರೀಗಳು

**ಇಂಡಿ ;** ಯುವಕರು ಶೆರೆ ಸಹವಾಸ ಮಾಡಿದರೆ ಅದರಿಂದ ಹೆಂಡತಿ, ಕುಟುಂಬ, ಸಮಾಜದಿಂದ ವಂಚಿತನಾಗುವದಲ್ಲದೆಶೆರೆಯುವಕರಆಯುಷ್ಯವನ್ನು ಕಡಿಮೆ ಮಾಡುತ್ತದೆ ಎಂದು ಗುರುದೇವ ಆಶ್ರಮ ಕಾತ್ರಾಳದ ಅಮೃತಾನಂದ ಶ್ರೀಗಳು ಹೇಳಿದರು.

ಪಟ್ಟಣದ ಕಾಳಿಕಾ ಮಂದಿರದಲ್ಲಿ ತಾಲೂಕಾ ಆಡಳಿತ, ಅಬಕಾರಿ ಇಲಾಖೆ, ಪುರಸಭೆ ಇಂಡಿ ಮತ್ತು ಗ್ರಾ.ಪಂ ರೂಗಿ ಮತ್ತು ಶ್ರೀ ಕ್ಷೇತ್ರ ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ಸಹಯೋಗದಲ್ಲಿ ನಡೆದ ತಾಲೂಕಿನ ಬೊಳೆಗಾಂವ ಗ್ರಾಮ ವ್ಯಸನ ಮುಕ್ತ ಗ್ರಾಮ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಇಂದು ಮಹಿಳೆಯರಲ್ಲಿ ಹೆಚ್ಚು ಸಂಸ್ಕೃತಿ ಕಾಣುತ್ತಿದ್ದೇವೆ. ಬೊಳೆಗಾಂವ ಗ್ರಾಮವನ್ನು ವ್ಯಸನ ಮುಕ್ತ ಮಾಡಲು ಸರಕಾರದ ಸಹಭಾಗಿತ್ವದಲ್ಲಿ ಎಸಿ ಅಬೀದ ಗದ್ಯಾಳರವರು ಮಾಡುತ್ತಿರುವ ಪ್ರಯೋಗ ಜಿಲ್ಲೆಯಲ್ಲಿಯೆಮೊದಲನೆಯದು.ಇಲ್ಲಿ70ಜನಒಂದು ವಾರದಿಂದ ಭಾಗವಹಿಸಿ ವ್ಯಸನ ಮುಕ್ತರಾಗಿದ್ದು ಮತ್ತು ಮುಂಬರುವ ದಿನಗಳಲ್ಲಿ ಬೊಳೆಗಾಂವ ಗ್ರಾಮ ವ್ಯಸನ ಮುಕ್ತ ರಾಗುತ್ತಿರುವದು ಇದು ನಾವು ಗಾಂಧೀಜಿಗೆ ನೀಡುತ್ತಿರುವ ದೊಡ್ಡ ಕಾಣಿಕೆ ಎಂದರು.

ಕಂದಾಯ ಉಪವಿಭಾಗಾಧಿಕಾರಿ ಅಬೀದ್ ಗದ್ಯಾಳ ಮಾತನಾಡಿ ಧರ್ಮಸ್ಥಳದ ಗ್ರಾಮಾಭಿ ವೃದ್ಧಿಯವರ ಪ್ರಯತ್ನದಿಂದ 70 ಜನರು ವ್ಯಸನ ಮುಕ್ತರಾಗಿದ್ದು ಅಂಧಕಾರದಿಂದ ಬೆಳಕಿನೆಡೆಗೆ ಬಂದಿದ್ದಾರೆ. ಯುವಕರು ತಮ್ಮಲ್ಲಿರುವ ಋಣಾತ್ಮಕ ವಿಚಾರಗಳನ್ನು ಬಿಟ್ಟು ಧನಾತ್ಮಕ ವಿಚಾರ ಮಾಡಿದರೆ ಸಮಾಜ ವ್ಯಸನ ಮುಕ್ತವಾಗಲು ಸಾಧ್ಯ ಎಂದರು.

ಜನ ಜಾಗೃತಿ ವೇದಿಕೆ ರಾಜ್ಯ ಅಧ್ಯಕ್ಷ ಸೋಮನಗೌಡ ಪಾಟೀಲ ಮನಗೂಳಿ( ಅಪ್ಪುಗೌಡ ) ಮಾತನಾಡಿ ರಾಜ್ಯದಲ್ಲಿಒಂದುಲಕ್ಷ80ಸಾವಿರಜನರನ್ನುಜನಜಾಗೃತಿ ಸಂಸ್ಥೆ ವ್ಯಸನ ಮುಕ್ತ ಮಾಡಿ ಹೊಸ ಜೀವನ ನೀಡಿ-



ದ್ದಾರೆ ,ಸಮಾಜದಲ್ಲಿ ಉತ್ತಮರಾಗಿ ಬದುಕಬೇಕಾಗಿದೆ. ಹೇಳುವದು ಸರಳ ವಿದೆ. ಆದರೆ ಪಾಲನೆ ಮಾಡುವದು ತುಂಬಾ ಕಷ್ಟವಾಗಿದ್ದು ಬೊಳೆಗಾಂವ 70 ಜನರನ್ನು ವ್ಯಸನ ಮುಕ್ತ ಮಾಡಿರುವದು ಸ್ವಾಗತಾರ್ಹ, ಇನ್ನಷ್ಟು ಪ್ರಯತ್ನಿಸಿ ಬೊಳೆಗಾಂವ ವ್ಯಸನ ಮುಕ್ತ ಮಾಡಲು ಪ್ರಯತ್ನಿಸಲಾಗುವದು ಎಂದರು.

ಝಳಕಿಯ ಉಪನ್ಯಾಸಕಿ ರವಿ ಅರಳಿ,ಧರ್ಮಸ್ಥಳ ಕ್ಷೇಮಾಭಿವೃದ್ದಿ ಸಂಸ್ಥೆಯ ಜಿಲ್ಲಾ ನಿರ್ದೇಶಕ ಸಂತೋಷಕುಮಾರ ರೈ,ಯೋಜನಾಧಿಕಾರಿ ನಟ-ರಾಜ

ಎಲ್.ಎಂ,ಪದ್ಮಾ ಮಾತನಾಡಿದರು.

ವೇದಿಕೆಯ ಮೇಲೆ ಜಿಲ್ಲಾ ಜನ ಜಾಗೃತಿ ವೇದಿಕೆ ಉಪಾಧ್ಯಕ್ಷರುದ್ರಪ್ಪಾಪೂಜಾರಿ,ಅಬಕಾರಿ ಇಲಾಖೆಯ ಪರೀನಾ ವಣಕ್ಯಾಳ, ರಾಹುಲ್ ನಾಯಕ,ವಾದಿರಾಜ, ತಾ.ಪಂ ಸಂಜಯ ಖಡಗೇಕರ, ಪ್ರಾದೇಶಿಕ ಯೋಜನಾಧಿಕಾರಿ ರಾಜೇಶ, ರೂಗಿ ಗ್ರಾ.ಪಂ ಪಿಡಿಒ ಬಸವರಾಜ ಬಬಲಾದ,ಶಶಿಕಲಾ ಬೇಟಗೇರಿ, ಸರಸ್ವತಿ, ಶಿಬಿರಾಧಿಕಾರಿ ದಿವಾಕರ ಪೂಜಾರಿ,ಆರೋಗ್ಯ ಸಹಾಯಕಿ ಜಯಲಕ್ಷ್ಮಿ ಪರಶುರಾಮ ಹೊಸಮನಿ,ಯೋಗ ಶಿಕ್ಷಕ ಬಿ.ಎಸ್.ಪಾಟೀಲ, ಗ್ರಾ.ಪಂ ಸದಸ್ಯ ಉಮೇಶ ಮತ್ತಿತರಿದ್ದರು.

# ಸದ್ದು ಮಾಡುತ್ತಿದೆ "ತಾರಕೇಶ್ವರ" ಸಿನೇಮಾ ಟ್ರೇಲರ್

**ಬೆಂಗಳೂರು :** ಪುರುಷೋತ್ತಮ್ ಓಂಕಾರ ಚಿತ್ರ ನಿರ್ದೇಶನದ ಭಕ್ತಿ ಪ್ರಧಾನ 'ತಾರಕೇಶ್ವರ','ಅಸುರ ಕುಲತಿಲಕ' ಅಡಿಬರಹದ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭವು ರೇಣುಕಾಂಬ ಸ್ಟುಡಿಯೋದಲ್ಲಿ ಅದ್ದೂರಿಯಾಗಿ ನಡೆಯಿತು.

ವೇದಾಂತ ಆಚಾರ್ಯ ಶ್ರೀ ಮಂಜುನಾಥ ಭಾರತಿ ಸ್ವಾಮಿಗಳು ಮೊದಲ ಟ್ರೇಲರ್, ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷ ಉಮೇಶ್ ಬಣಕಾರ್ ಎರಡನೇ ಟ್ರೇಲರನ್ನು ಬಿಡುಗಡೆ ಮಾಡಿ ತಂಡಕ್ಕೆ ಶುಭಹಾರೈಸಿದರು. ಇದೇ ಸಂದರ್ಭದಲ್ಲಿ ನಿರ್ದೇಶಕರ ಸಂಘದ ಅಧ್ಯಕ್ಷ ಎನ್ನಾರ್ಕೆ ವಿಶ್ವನಾಥ್, ಅಂಬೇಡ್ಕರ್ ಸೇನೆಯ ಅಧ್ಯಕ್ಷ ಮೂರ್ತಿ, ಕನ್ನಡ ಸಂಘದ ಅಧ್ಯಕ್ಷ ಬಸವರಾಜ ಪಡುಕೋಟೆ ಮುಂತಾದ ಗಣ್ಯರುಗಳು ಉಪಸ್ಥಿತರಿದ್ದರು.

ಪಾತ್ರದ ಕುರಿತು ಮಾತನಾಡಿದ ಗಣೇಶ್‌ರಾವ್ ಕೇಸರ್‌ಕರ್- ನಮ್ಮ ಸಿನಿಮಾ ತೆರೆಗೆ ಬರಲು ಸಿದ್ದವಾಗಿದೆ. ಸೆನ್ಸಾರ್‌ನವರು ಪ್ರಶಂಸೆ ವ್ಯಕ್ತಪಡಿಸಿ ಯಾವುದೇ ದೃಶ್ಯಕ್ಕೆ ಆಕ್ಷೇಪ ವ್ಯಕ್ತಪಡಿಸದೆ 'ಯು' ಪ್ರಮಾಣ ಪತ್ರ ನೀಡಿದ್ದಾರೆ. ನಾನು ಯಾವತ್ತೂ ಹಣಕ್ಕೆ ಪ್ರಾಮುಖ್ಯತೆ ಕೊಟ್ಟಿಲ್ಲ. ಉತ್ತಮ ಚಿತ್ರವನ್ನು ಕನ್ನಡಿಗರಿಗೆ ಕೊಡಬೇಕೆಂದು ನಿರ್ಮಾಣ ಮಾಡಿದ್ದೇನೆ. ಇಲ್ಲಿ ಬಂದಿರುವ ಅತಿಥಿಗಳು ನನ್ನ ಮೇಲಿನ ಪ್ರೀತಿಯಿಂದ ಬಂದಿದ್ದಾರೆ. ಪೌರಾಣಿಕ ಚಿತ್ರ ಮಾಡುವುದು ಸುಲಭದ ಮಾತಲ್ಲ. ಸೆಟ್‌ನಲ್ಲಿ ಲೈಟಿನ ಕಂಬವು ಕಾಣುವಂತಿಲ್ಲ. ನಿರ್ಮಾಪಕರ ಕಷ್ಟ ಏನೆಂದು ಈಗ ಅರ್ಥವಾಗಿದೆ. ಹೊಸ



ಆಲೋಚನೆ ಎನ್ನುವಂತೆ ಈಗಾಗಲೇ ಟಿಕೆಟ್‌ನ್ನು ಮುದ್ರಣ ಮಾಡಿಸಲಾಗಿದೆ . ದರ ನೂರು ರೂಪಾಯಿ ಇರುತ್ತದೆ. ಇದನ್ನು ಖರೀದಿಸಿದವರಿಗೆ ಕರ್ನಾಟಕದ ಯಾವುದೇ ಜಿಲ್ಲೆ, ತಾಲ್ಲೂಕು ಕೇಂದ್ರದಲ್ಲಿ ಸಿನಿಮಾ ವೀಕ್ಷಿಸಬಹುದು. ನಿಮ್ಮೆಲ್ಲರ ಪ್ರೋತ್ಸಾಹದಿಂದ ಇಲ್ಲಿಯವರೆಗೂ 333 ಚಿತ್ರಗಳಲ್ಲಿ ನಟಿಸಿದ್ದೇನೆ ಎಂದರು.

ನಿರ್ಮಾಪಕರ ಕೋರಿಕೆಗೆ ಮನ್ನಣೆ ನೀಡಿದ ಆಹ್ವಾನಿತರು ಅಂದಾಜು ಐವತ್ತು ಸಾವಿರ ರೂ ಮೌಲ್ಯದ ಒಂದಷ್ಟು ಸಗಟು ಟಿಕೆಟ್‌ಗಳನ್ನು ಸ್ಥಳದಲ್ಲೇ ಖರೀದಿಸಿದರು. ಹಾಗೂ ಭಾರತೀಯ ಅಂಚೆ ಇಲಾಖೆಯವರು ಹೊರತಂದಿರುವ 'ತಾರಕೇಶ್ವರ' ಚಿತ್ರ ಇರುವ ಅಂಚೆಚೀಟಿಯನ್ನು ಗಣ್ಯರುಗಳು ಅನಾವರಣಗೊಳಿಸಿದರು. ಕಥೆ,ಚಿತ್ರಕಥೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿರುವ ಪುರುಷೋತ್ತಮ್ ಓಂಕಾರ್ ಹೇಳುವಂತೆ ಶಿವಪುರಾಣದ ಕಥೆಯಲ್ಲಿ ತಾರಕಾಸುರ ಅಸುರ ಆದರೂ ಕೂಡ, ತಂದೆ ಕೊಂದವನ ಮೇಲೆ ಸೇಡು ತೀರಿಸಿಕೊಳ್ಳಲು ತಪ್ಪಸ್ಸು ಮಾಡಿ ತನಗೆ ಸಾವು ಬರಬಾರದೆಂದು ಬ್ರಹ್ಮನಿಂದ ವರ ಪಡೆದುಕೊಳ್ಳುತ್ತಾನೆ. ಮುಂದೆ ಯಾವ ರೀತಿ ಹೋರಾಟ ಮಾಡುತ್ತಾನೆಂದು ಕುತೂಹಲದ ಸನ್ನಿವೇಶಗಳೊಂದಿಗೆ ತೋರಿಸಲಾಗಿದೆ. ಗಣೇಶ್‌ರಾವ್ ಕೇಸರ್‌ಕರ್‌ರವರು ಶಿವ, ಕುರುಡ, ತಾರಕೇಶ್ವರ ಮತ್ತು ಮಹಾರಾಜ ಹೀಗೆ ನಾಲ್ಕು ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಅವರ ಪುತ್ರ ಪ್ರಜ್ವಲ್ ಕೇಸರ್‌ಕರ್ ಇಂದ್ರನಾಗಿ ಕಾಣಿಸಿಕೊಂಡಿದ್ದಾರೆ.

ಬೆಂಗಳೂರು, ಶ್ರೀರಂಗಪಟ್ಟಣ, ಮೈಸೂರು ಕಡೆಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ ಎಂಬುದಾಗಿ ಮಾಹಿತಿ ಬಿಚ್ಚಿಟ್ಟರು.

ರಾಜನ ಮಗಳು, ಶಿವ ಭಕ್ತೆ, ಪಾರ್ವತಿಯಾಗಿ ರೂಪಾಲಿ ನಾಯಕಿ. ತಾರಾಕೇಶ್ವರನನ್ನು ಸಂಹಾರ ಮಾಡುವ ಬಾಲ ಸುಬ್ರಹ್ಮಣ್ಯನಾಗಿ ಬಾಲನಟಿ ಋತುಸ್ಪರ್ಶ ಕಾಣಿಸಿಕೊಂಡಿರುವುದು ವಿಶೇಷ. ಇವರೊಂದಿಗೆ ಸುಮಿತ ಪ್ರವೀಣ್, ಅನ್ನಪೂರ್ಣ, ರತಿಮನ್ಮಥರಾಗಿ ವಿಕ್ರಂಸೂರಿ-ನಮಿತಾರಾವ್, ಉಳಿದಂತೆ ಶಂಕರಭಟ್,ಶ್ರೀವಿಷ್ಣು, "ಜಿಮ್‌ಶಿವು ಸಂಭಾಷಣೆ " ಎನ್.ಟಿ.ರಾಮಸ್ವಾಮಿ, ಗುರುರಾಜ್, ಹೆಜ್ಜಾಜಿ ಮಹಾದೇವ, ಬಸವರಾಜದೇಸಾಯಿ, ವೀರೇಂದ್ರ ಬೆಳ್ಳಿಚುಕ್ಕಿ, ಮಧು ಕಾರ್ತಿಕ್, ಗೀತಾ, ರಾಜೇಶ್ವರಿ ಪಾಂಡೆ, ರಕ್ಷಾಗೌಡ, ರಂಜಿತ, ಶ್ರೀರಾಮ್, ರೂಪ ಮುಂತಾದವರು ಅಭಿನಯಿಸಿದ್ದಾರೆ.

ತುಳಜಾಬಾಯಿ, ರೂಪ.ಎಸ್.ದೊಡ್ಮನಿ, ಡಾ.ಸುಮಿತ ಪ್ರವೀಣ್, ಬಸವರಾಜ್ ದೇಸಾಯಿ ಸಹ ನಿರ್ಮಾಪಕರುಗಳಾಗಿ ಗುರುತಿಸಿಕೊಂಡಿದ್ದಾರೆ. ಸಂಗೀತ ರಾಜ್‌ಭಾಸ್ಕರ್, ಸಂಭಾಷಣೆ ಜಿಮ್ ಶಿವು, ಛಾಯಾಗ್ರಹಣ ಮುತ್ತುರಾಜ್, ಸಂಕಲನ ಅನಿಲ್‌ಕುಮಾರ್, ಪತ್ರಿಕಾ ಸಂಪರ್ಕ ಚಂದ್ರಶೇಖರ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ , ನೃತ್ಯ ಕಪಿಲ್, ನಿರ್ಮಾಣ ನಿರ್ವಹಣೆ ದೀಪಕ್‌ಬಾಬು ನಿರ್ವಹಿಸಿದ್ದಾರೆ.

**ವರದಿ:**
**ಡಾ.ಪ್ರಭು ಗಂಜಿಹಾಳ**
**ಮೊ: 9448775346**



# ಕರಾಟೆಯಲ್ಲಿ ಎರಡು ಚಿನ್ನದ ಪದಕ

**ಚಿಮ್ಮಡ :** ಗ್ರಾಮದ ವಿಕಾಸ ವಿಜಯಕುಮಾರ ಪೂಜಾರಿ ಅಂತರ್‍ರಾಷ್ಟ್ರೀಯ ಕರಾಟೆ ಸ್ಪರ್ಧೆಯಲ್ಲಿ ಎರಡು ಚಿನ್ನದ ಪದಕ ಪಡೆಯುವ ಮೂಲಕ ವಿಶೇಷ ಸಾಧನೆ ಗೈದಿದ್ದಾನೆ. ಗುರುಪ್ರಸಾದ ಬರೀಬಶೆಟ್ಟಿಯವರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿರುವ ವಿಕಾಸ ಹುಬ್ಬಳ್ಳಿಯಲ್ಲಿ ಹಮ್ಮಿಕೊಂಡಿದ್ದ ಅಂತರ್‍ರಾಷ್ಟ್ರೀಯ ಕರಾಟೆ ಚಾಂಪಿಯನ್ಶಿಪ್ ಸ್ಪರ್ಧೆಯಲ್ಲಿ ಭಾಗವಹಿಸಿ ಕಟಾ ಮತ್ತು ಕುಮಿಟೆ ಎರಡೂ ಸ್ಪರ್ಧೆಗಳಲ್ಲಿ ಚಿನ್ನದ ಪದಕ ಪಡೆಯುವ ಮೂಲಕ ಗ್ರಾಮಕ್ಕೆ ಕೀರ್ತಿ ತಂದಿದ್ದಾನೆ. ವಿಶಿಷ್ಠ ಸಾಧನೆಗೈದ ವಿದ್ಯಾರ್ಥಿಗೆ ಸ್ಥಳೀಯ ವಿರಕ್ತಮಠದ ಪ್ರಭು ಮಹಾಸ್ವಾಮಿಗಳು, ಶ್ರೀ ಜನಾರ್ಧನ ಮಹಾರಾಜರು ಹಾಗೂ ಸ್ಥಳೀಯ ಗ್ರಾಮ ಪಂಚಾಯತ್ ಆಡಳಿತ ಮಂಡಳಿ ಅಭಿನಂದಿಸಿದೆ.

# ಪಾರಿಜಾತದ ಪರಿಮಳ ಹರಡಿಸಿದ ಸಿದ್ದಪ್ಪನಿಗೆ ರಾಜ್ಯೋತ್ಸವ ಗರಿ: ಶಿವಾನಂದ ಶೆಲ್ಲಿಕೇರಿ

**ಲೋಕಾಪುರ :** ಪಾರಿಜಾತ ಕಲೆಗೆ ತನ್ನ ಜೀವನವನ್ನೇ ಮುಡುಪಾಗಿಟ್ಟ ದಾದನಟ್ಟಿ ಗ್ರಾಮದ ಸಿದ್ದಪ್ಪ ಕುರಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ದೊರಕಿದ್ದು ಸಂತಸ ತಂದಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಹೇಳಿದರು. ಪಟ್ಟಣದಲ್ಲಿ ಸುದ್ದಿಗೋಷ್ಠಿಗಾ ರರೊಂದಿಗೆ ಮಾತನಾಡಿದ ಅವರು ಗ್ರಾಮೀಣ ಭಾಗದ ಹಿರಿಯ ಕಲಾವಿದರು ತಮ್ಮ ಜೀವನಕಲೆಗಾಗಿ ಸವೆಸಿದ್ದಾರೆ. ಕಲೆಗೆ ಬೆಲೆ ಕಟ್ಟಲಾಗುವುದಿಲ್ಲ. ದಿ. ಕೃಷ್ಣಾಜಿ ದೇಶಪಾಂಡೆ ಅವರ ಗರಡಿಯಲ್ಲಿ ಬೆಳೆದು ಒಬ್ಬ ಪರಿಪೂರ್ಣ ಕಲಾವಿದನಾಗಿ ಸಿದ್ದಪ್ಪ ಕುರಿ ಕಲೆಯಲ್ಲಿ ಯಶಸ್ವಿಯಾದರು. ಇಂದಿನ ದಿನಮಾನಗಳಲ್ಲಿ



ಕಲೆ ಹಾಗೂ ಕಲಾಕಾರರನ್ನು ಉಳಿಸಿಬೆಳೆಸಬೇಕಾದ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಹೇಳಿದರು.

ಮುಧೋಳ ತಾಲೂಕಾ ಕಸಾಪ ಅಧ್ಯಕ್ಷ ಆನಂದ ಪೂಜಾರಿ ಕಸಾಪ ವಲಯ ಘಟಕ ಅಧ್ಯಕ್ಷ ಎಸ್.ಎಂ. ರಾಮದುರ್ಗ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಯಲ್ಲವ್ವ ರೊಡ್ಡಪ್ಪನವರ, ತಾಲೂಕಾ ಕಜಾಪ ಅಧ್ಯಕ್ಷ ರಮೇಶ ಅರಕೇರಿ, ಕಜಾಪ ವಲಯ ಘಟಕ ಅಧ್ಯಕ್ಷ ಪ್ರಭು ಹೊನವಾಡ, ಸಂಗಮೇಶ ನೀಲಗುಂದ, ಪ್ರವೀಣ ಗಂಗಣ್ಣವರ, ತಾಲೂಕಾ ನೌಕರ ಸಂಘದ ಅಧ್ಯಕ್ಷ ರಮೇಶ ನಿಡೋಣಿ, ಪ್ರಕಾಶ ಬೆಳಗಲಿ ಇದ್ದರು.

# ಒಳ ಮೀಸಲಾತಿ, ಎ.ಜೆ. ಸದಾಶಿವ ಆಯೋಗ ವರದಿ ಜಾರಿಗೆ ಆಗ್ರಹಿಸಿ ಪಟ್ಟಣದಲ್ಲಿ ಬೃಹತ ಪ್ರತಿಭಟನೆ

**ಮುದ್ದೇಬಿಹಾಳ :** ಒಳ ಮೀಸಲಾತಿ, ಎ.ಜೆ. ಸದಾಶಿವ ಆಯೋಗ ವರದಿ ಅನುಷ್ಠಾನಕ್ಕೆ ಆಗ್ರಹಿಸಿ ಪಟ್ಟಣದಲ್ಲಿ ಬೃಹತ ಪ್ರತಿಭಟನೆ ನಡೆಸಲಾಯಿತು. ದಲಿತ ಸಮುದಾಯದ ಮುಖಂಡರು ಸೇರಿದಂತೆ ಒಳ ಮೀಸಲಾತಿಗೆ ಒಳಪಡುವ ಎಲ್ಲಾ ಜನಾಂಗದವರು ಈ ಪ್ರತಿಭಟನೆಯಲ್ಲಿ ಭಾಗಿಯಾಗಿ ಒಳ ಮೀಸಲಾತಿ ಜಾರಿಗೆ ಸರ್ಕಾರಕ್ಕೆ ಒತ್ತಾಯಸಿದರು.

ನಗರದ ಅಂಬೇಡ್ಕರ್ ವೃತ್ತ, ಬಸವೇಶ್ವರ ವೃತ್ತ ಸೇರಿದಂತೆ ಇತರ ಪ್ರಮುಖ ವೃತ್ತಗಳಲ್ಲಿ ಸಂಚ-ರಿಸಿದ ಈ ಬೃಹತ ರ್ಯಾಲಿ ತಹಶೀಲ್ದಾರ್ ಕಚೇರಿಗೆ ತೆರಳಿ ಸರ್ಕಾರಕ್ಕೆ ಬರೆದ ಮನವಿ ಪತ್ರವನ್ನು ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಸಲ್ಲಿಸಿದರು.ಇದಕ್ಕೂ ಮುನ್ನ ತಹಶೀಲ್ದಾರ ಕಚಸೇರಿಯ ಆವರಣದಲ್ಲಿ ಬಹಿರಂಗ ಸಭೆ ನಡೆಸಿದರು. ಈ ವೇಳೆ ದುರ್ಗಪ್ಪ ದೊಡಮನಿ ಅವರ ಮಗಳು ರಾಜೇಶ್ವರಿ ದುರ್ಗಪ್ಪ ದೊಡಮನಿ ಬಸವಣ್ಣನವರ ವಚನಗಳನ್ನು ಹೇಳುವ ಮೂಲಕ ಈ ಬಹಿರಂಗ ಸಭೆಗೆ ಚಾಲನೆ ನೀಡಲಾಯಿತು.ಬಳಿಕ ಮಾತನಾಡಿದ ದಲಿತ ಮುಖಂಡ ಡಿ. ಬಿ. ಮುದೂರ ಅವರು ಸರ್ಕಾರ ಒಳ ಮೀಸಲಾತಿ ಜಾ-ರಿಗೊಳಿಸಬೇಕಾಗಿದೆ. ಆದ್ರೆ ಇನ್ನುವರೆಗೆ ಒಳ ಮೀಸಲಾತಿ ಅನುಷ್ಠಾನಕ್ಕೆ ತಂದಿಲ್ಲಾ. ಹಾಗಾಗಿ ಒಳ ಮೀಸಲಾತಿಗೆ ಒಳಪಡುವ ಎಲ್ಲಾ ಜನಾಂಗದವರು ಈ ಬೃಹತ ಪ್ರತಿಭಟನೆಯಲ್ಲಿ ಭಾಗಿಯಾಗಿ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಸರ್ಕಾಕ್ಕೆ ಹಕ್ಕೊತ್ತಾಯ ಮಾಡುತ್ತಿದ್ದೇವೆ ಎಂದರು. ಸತತ 30 -40 ವರ್ಷದಿಂದ ಈ ಹೋರಾಟ ನಡೆಯುತ್ತಲೇ ಇದೆ. ಜತೆಗೆ ಸರ್ವಚ್ಚನ್ಯಾಯಾಲಯ ಒಳ ಮೀಸಲಾತಿ ಜಾ-ರಿಗೆ ಆದೇಶ ಹೊರಡಿಸಿದೆ. ಆದ್ರೆ ಇನ್ನುವರೆಗೂ ಒಳ ಮೀಸಲಾತಿ ಜಾರಿ ಮಾಡಿಲ್ಲಾ. ಕೂಡಲೇ ಸರ್ಕಾರ ಜಾರಿ ಮಾಡಬೇಕು. ಇಲ್ಲದಿದ್ದರೇ ಮುಂದೊಂದು ದಿನ ರಾಜ್ಯ ವ್ಯಾಪಿ ಈ ಹೋರಾಟ ಮುಂದುವರೆಸಲಾಗುವುದು ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು. ಇನ್ನು ಸಿ .ಜಿ.ವಿಜಯಕರ ಅವರು ಮಾತನಾಡಿ ಒಳ ಮೀಸಲಾತಿಯ ಮಹತ್ವದ ಬಗ್ಗೆ ತಿಳಿಸಿದರು. ಶೋಚಿತ ವರ್ಗದ ಜನರಿಗೆ ಸಮಾನತೆಯಲ್ಲಿ ಅನ್ಯಾಯವಾಗುತ್ತಿದೆ, ಸರಿಸಮಾನತೆ ಈ ಜನಾಂಗದವರಿಗೂ ಸಿಗಬೇಕು ಎಂದರು. ಹಿಂದುಳಿದ ವರ್ಗದವರಿಗೆ ನ್ಯಾಯ ಸಿಗಬೇಕು. ಈ ಮೂಲಕ ಒಳ ಮೀಸಲಾತಿ ದೊರಕಬೇಕು



ಎಂದು ಸರ್ಕಾರಕ್ಕೆ ಒತ್ತಾಯಸಿದರು.

ಇನ್ನು ದಲಿತ ಮುಖಂಡ ಹರೀಷ್ ನಾಟೀಕಾರ ಮಾತನಾಡಿಈಗಾಗಲೇಸರ್ವಚ್ಚನ್ಯಾಯಾಲಯ ಒಳ ಮೀಸಲಾತಿ ಜಾರಿಗೆ ಆದೇಶ ಹೊರಡಿಸಿದೆ. ಆದ್ರೆ ರಾಜ್ಯ ಸರ್ಕಾರ ಮಾತ್ರ ಕಾರ್ಯ ರೂಪಕ್ಕೆ ತರುತ್ತಿಲ್ಲಾ..ಹಾಗಾಗಿ ತಾಲೂಕಿನಲ್ಲಿ ಈಗಾಗಲೇ ಒಳ ಮೀಸಲಾತಿ ಜಾಗೃತಿ ಜಾಥಾ ನಡೆಸಲಾಯ್ತು. ಕೂಡಲೇ ಸರ್ಕಾರ ಎಚ್ಚೆತ್ತು ಒಳ ಮೀಸಲಾತಿ ಜಾರಿಗೊಳಿಸುವ ಮೂಲಕ ಶೋಶಿತ ವರ್ಗದವರಿಗೆ ನ್ಯಾಯದೊರಕಿಸಿ ಕೊಡಬೇಕು. ಇಲ್ಲದಿದ್ದರೇ ಮುಂದಿನ ಚುನಾವಣೆಯಲ್ಲಿ ನಮ್ಮ ಜನಾಂಗದವರು ನಿಮ್ಮನ್ನು ತಕ್ಕಪಾಠ ಕಲಿಸಲಿದ್ದಾರೆ ಎಂದು ಸರ್ಕಾರದ ವಿರುದ್ಧ ಕಿಡಿಕಾರಿದರು. ಇನ್ನು ಈ ಹೋರಾಟ ಮೂಲಕ ನಾವು ಒಳ ಮೀಸಲಾತಿ ಪಡೆದೆ ಪಡೆಯುತ್ತೆವೆ ಎಂದು ಸರ್ಕಾಕ್ಕೆ ಎಚ್ಚ-ರಿಸಿದರು. ಇನ್ನು ತಂಗಡಿಯವರಾದ ಶಾಂತಪ್ಪ ಪೂಜಾರಿ, ಕಾಶಿನಾಥ ದೊಡಮನಿ ಅವರು ಒಳ ಮೀಸಲಾತಿ ಬಗ್ಗೆ ಮಾತನಾಡಿದರು.

ಬಾಕ್ಸ್ :ಇನ್ನು ಒಳ ಮೀಸಲಾತಿ ಜಾಗೃತಿ ಜಾಥಾದ ನೇತೃವಹಿಸಿದ ತಿಪ್ಪಣ್ಣ ದೊಡಮನಿ ಮಾತನಾಡಿ ಒಳ ಮೀಸಲಾತಿಯಲ್ಲಿ ಸರ್ಕಾರ ಮೀನಾಮೇಷ ಎಣಿಸುತ್ತಿದೆ. ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುನ್ನು ತಿರಸ್ಕರಿಸುತ್ತಿರವ ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು. ಕೊಡಲೇ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ಸದಾಶಿವ ವರದಿಯನ್ನು ಜಾರಿಗೆ ಮಾಡಬೇಕು ಒಂದು ವೇಳೆ ವಿಳಂಬ ಮಾಡಿದರೆ ಬೆಂಗಳೂರು ವಿಧಾನಸೌಧ ಮುತ್ತಿಗೆ ಹಾಕುವ ಮೂಲಕ ರಾಜ್ಯದಲ್ಲಿ ಉಗ್ರವಾದ ಪ್ರತಿಭಟನೆ ಮಾಡುತ್ತೇವೆ ಎಂದು ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟರು.

ಮುದ್ದೇಬಿಹಾಳ ವತಿಯಿಂದ ಈ ಒಳ ಮೀಸಲಾತಿಗೆ ಆಗ್ರಹಿಸಿ ಈಗಾಗಲೇ ತಾಲೂಕಿನ ಪ್ರತಿಯೊಂದು ಗ್ರಾಮ ಪಂಚಾಯತಿವಾರು ಜಾಗೃತಿ ಜಾಥಾ ನಡೆಸಲಾಗುತ್ತಿದ್ದು, ಆ ಜಾಥಾ ಇಂದು ನಗರಕ್ಕೆ ಆಗಮಿಸಿ ನಗರದಲ್ಲಿ ಬೃಹತ ಪ್ರತಿಭಟನೆ ನಡೆಸಿತು. ಅ.21 ರಿಂದ ಅ.30ವರೆಗೆ ಸುಮಾರು ಹತ್ತು ದಿನಗಳ ಕಾಲ ಈ ಜಾಥಾ ತಾಲೂಕಿನಾದ್ಯಂತ ಸಂಚರಿಸಿ ಒಳ ಮೀಸಲಾತಿ ಬಗ್ಗೆ ಜಾಗೃತಿಮೂಡಿಸಿತು.ಇದೇಸಂದರ್ಭದಲ್ಲಿ ಚಿತ್ರದುರ್ಗದ ಕೋಡಿಹಳ್ಳಿಯ ಷಡಕ್ಷರ ಮುನಿ ಸ್ವಾಮೀಜಿ, ಆದಿಜಾಂಬವ ಮಠ ಸ್ವಾಮೀಜಿ ಅವರು ಕೂಡ ಈ ಬೃಹತ ರ್ಯಾಲಿಯಲ್ಲಿ ಭಾಗಿಯಾಗಿದ್ದರು. ಹಾಗೂ ದಲಿತ ಮುಖಂಡರಾದ ಡಿ. ಬಿ.ಮದೂರ, ಹರೀಶ್ ನಾಟಿಕಾರ, ಸಿ. ಜಿ. ವಿಜಯಕರ್, ಬಾಲಚಂದ್ರ ಹುಲ್ಲೂರ,ಪರಶುರಾಮ ಕೂಚಬಾಳ,ಹುಲಗಪ್ಪ ನಾಗರಬೆಟ್ಟ, ಬಸವರಾಜ ನಾಗರಬೆಟ್ಟ, ಭೀಮಣ್ಣ ಲೋಟಗೇರಿ, ರವಿ ಬಸರಕೋಡ, ರವಿ ಗರಸಂಗಿ, ಬೈಲಪ್ಪ ಗರಸಂಗಿ, ರಾಘು ನಾಲತವಾಡ, ಶಿವು ನಾಲತವಾಡ, ನಾಗಪ್ಪ ಲೋಟಗೇರಿ, ಶೇಕು ಮಾದರ, ಪುರಸಭೆ ಸದಸ್ಯ ಶಿವು ಶಿವಪುರ, ಪ್ರಶಾಂತ ಕಾಳೆ, ಪ್ರಕಾಶ ಸರೂರ, ದೇವರಾಜ ಹಂಗರಗಿ, ಕಾಶೀನಾಥ್ ದೊಡಮನಿ, ಪೂಜಾರಿ, ಸೇರಿದಂತೆ ಇತರ ದಲಿತ ಮುಖಂಡರು ಉಪಸ್ಥಿತರಿದ್ದರು.

# ಗುಬ್ಬಿಯ ಗೂಡಲ್ಲಿ 'ಸುವರ್ಣ ಕರ್ನಾಟಕ' ಸಂಭ್ರಮ

ನವೆಂಬರ್ ಒಂದರ ಕನ್ನಡ ರಾಜ್ಯೋತ್ಸವ ದಿನದಂದು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪ್ರತಿವರ್ಷ ಕೊಡ ಲಾಗುವ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಸುವರ್ಣ ಕರ್ನಾಟಕ ಸಂಭ್ರಮ ಈ ವರ್ಷದ ಪ್ರಶಸ್ತಿಗೆ ರಾಜ್ಯದ ಸಾಹಿತಿಗಳು, ಪತ್ರಕರ್ತರು, ರೈತರು, ಕಲಾವಿದರು ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸರಕಾರ ಪ್ರಶಸ್ತಿಗೆ ಆಯ್ಕೆ ಮಾಡಿದೆ ಅದರಲ್ಲಿ ಕಲ್ಯಾಣ ಕರ್ನಾಟಕ ಭಾಗದ ಸುವರ್ಣ ಸಂಭ್ರಮ ಪ್ರಶಸ್ತಿಗೆ ಕಲ್ಬುರ್ಗಿ ಯಲ್ಲಿ 40 ವರ್ಷಗಳಿಂದ ತಮ್ಮ ವೈದ್ಯಕೀಯ ವೃತ್ತಿಯ ಜೊತೆಗೆ ಸಾಮಾಜಿಕ ಸೇವೆ, ಸಾಹಿತ್ಯ ಸೇವೆ ಯಲ್ಲಿ ತಮ್ಮನ್ನು ತಾವು ತೊಡೆಸಿಕೊಂಡಿರುವ ಯಾದಗಿರಿಯ ಡಾ. ಎಸ್. ಎಸ್. ಗುಬ್ಬಿ ಎಂದೆ ಹೆಸರಾದ ಡಾ..ಶ್ರೀ ಸಿದ್ದಬಸಯ್ಯ ಶಿವಶಂಕರಯ್ಯ ಗುಬ್ಬಿ ಅವರು ಈ ಪ್ರಶಸ್ತಿಗೆ ಭಾಜನರಾಗಿರುವುದು ಅವರ ಅಪಾರ ಅಭಿಮಾನಿಗಳಿಗೆ ಸಂತೋಷವಾಗಿದೆ.

ಆಗಿನ ಕಲಬುರ್ಗಿ ಜಿಲ್ಲೆಯ ಈಗಿನ ಯಾದಗಿರಿ ಜಿಲ್ಲೆಯ ವಡಗೇರಾ ತಾಲೂಕಿನ ಕುಗ್ರಾಮ ಕೊಂಕಲ್ ಗ್ರಾಮದ ಪ್ರಗತಿಪರ ರೈತರಾದ ಸುಸಂಸ್ಕೃತ ಕುಟುಂಬದ ತಂದೆ ಶಿವಶಂಕರಯ್ಯ ಹಾಗೂ ತಾಯಿ ಆದಮ್ಮ ಅವರ ಉದರದಲ್ಲಿ ಸಿದ್ದ ಬಸವಯ್ಯ ದಿನಾಂಕ 4--6--1948 ರಂದು ಜನಿಸಿದರು. ನಾಲ್ಕು ಜನ ಅಣ್ಣತಮ್ಮಂದಿರು ಮೂರು ಜನ ಅಕ್ಕತಂಗಿಯರ ಒಡನಾಟದಲ್ಲಿ ಹಾಗೂ ಗ್ರಾಮದ ಜನರ ಪ್ರೀತಿಯಲ್ಲಿ ಬೆಳೆದ ಸಿದ್ಧಬಸಯ್ಯ ಅವರು ತಂದೆ ಹಾಕಿಕೊಟ್ಟ ಸೌಜನ್ಯ,ಸಂಸ್ಕಾರ ಅವರ ಜೀವನದಲ್ಲಿ ಈಗಲೂ ಅಳವಡಿಸಿಕೊಂಡು ಬಂದಿದ್ದಾರೆ.

ಈಗಿನ ಅವರ ವೈದ್ಯಕೀಯ ವೃತ್ತಿಯಲ್ಲಿ ಗಳಿಕೆ ಮಾಡಿದ್ದು ಅಪಾರ ಆಸ್ತಿಯಲ್ಲ ಅವರು ಮಾಡಿದ ಸಾಮಾಜಿಕ,ಸಾಹಿತ್ಯಿಕ ಸೇವೆ ಜೊತೆಗೆ ಬಡಜನ-ರಿಗೆ ವೈದ್ಯವೃತ್ತಿಯಲ್ಲಿ ಸಲ್ಲಿಸಿದ್ದ ಸೇವೆಯೇ ಅವರ ಆಸ್ತಿ. ಬರಗಾಲದ ಆ ದಿನಗಳಲ್ಲಿ ರಾಜ್ಯದ 175 ತಾಲೂಕುಗಳಲ್ಲಿ ಅತಿ ಕಡಿಮೆ ಸಾಕ್ಷರತೆ ಹಾಗೂ ಅತಿ ಕಡಿಮೆ ಬಡತನ ಹೊಂದಿದ 170 ರ ಕೆಳಗಿನ ಸ್ಥಾನದಲ್ಲಿರುವ ತಾಲೂಕುಗಳಾದ ಯಾದ್ಗೀರ್, ಚಿಂಚೋಳಿ, ಜೇವರ್ಗಿ, ಚಿತ್ತಾಪುರ, ಅಬ್ಜಲ್ಪುರ್ ,ಸೇಡಂ ಮುಂತಾದ ತಾಲೂಕಿನ ಬಡಜನ ತುತ್ತು ಅನ್ನಕ್ಕಾಗಿ ಹೈದರಾಬಾದ, ಮುಂಬೈ ಪುಣೆ, ಬೆಂಗಳೂರಿನಂತಹ ಪಟ್ಟಣ ಗಳಿಗೆ ವಲಸೆ ಹೋಗುವುದು ಗುಳೆ ಹೋಗುವುದು ದಿನ ನಿತ್ಯದ ಕೆಲಸವಾಗಿತ್ತು.

ಡಾ.ಎಸ್. ಎಸ್ .ಗುಬ್ಬಿ ಅವರು ತಮ್ಮ ಪ್ರಾಥ-'ಮಿಕ ಶಿಕ್ಷಣ ತಮ್ಮ ಗ್ರಾಮದ ಕೊಂಕಲದಲ್ಲಿಯೇ ದನಗಳು ಕಟ್ಟುವ ಕೊಟ್ಟಿಗೆಯ ಶಾಲೆಯಲ್ಲಿ ನಾಲ್ಕನೇ ತರಗತಿವರೆಗೆ ಓದಿದರು. ಆನಂತರ ಸುರಪುರದ ಕಡಲಪ್ಪನ ಮಠದ ದರ್ಬಾರಿ ಶಾಲೆಯಲ್ಲಿಐದು,ಆರನೇತರಗತಿವರೆಗೆಅಭ್ಯಾಸ ಮಾಡಿದರು .ಮುಂದೆ 7, 8ನೇ ತರಗತಿಗಳು ಯಾದಗಿರಿಯ ಸರ್ಕಾರಿ ಶಾಲೆಯಲ್ಲಿ ಅಭ್ಯಾಸ ಮಾಡಿದರು ಆ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಲಬುರ್ಗಿಯ ಎಂ.ಪಿ.ಎಚ್.ಎಸ್. ಸರ್ಕಾರಿ ಶಾಲೆಯಲ್ಲಿ 9, 10 ನೇ ತರಗತಿವರೆಗೆ ಅಭ್ಯಾಸ ಮಾಡಿದರು. ಕಲ್ಬುರ್ಗಿಯ ಸರ್ಕಾರಿ ಡಿಗ್ರಿ ಕಾಲೇಜಿನಲ್ಲಿಪಿಯುಸಿಅಭ್ಯಾಸಕ್ಕೆಸೇರಿಅಲ್ಲಿಯೇ ಬಿ.ಎಸ್ಸಿ .ಪದವಿ ಪೂರ್ಣಗೊಳಿಸಿದರು.

ಎಲ್ಲಾ ಮಕ್ಕಳಲ್ಲಿ ಸಿದ್ಧಬಸಯ್ಯ ಜಾಣ ಇದ್ದಾನೆ ಇವನಿಗೆ ಇಂಜಿನಿಯರ ಅಥವಾ ಡಾ. ಓದಿಸಬೇಕೆಂದು ತಂದೆಯ ಆಸೆ.

ಕಾರಣ ಯಾದಗಿರಿಯ ಅಡತದಲ್ಲಿ 5000 ಸಾಲ ಮಾಡಿ ಮಗನ ಕೈಯಲ್ಲಿ ಕೊಟ್ಟು ಮೆಡಿಕಲ್ ಕಲಿಯಲು ಬಳ್ಳಾರಿಗೆ ಕಳಿಸಿದ್ದರು.

1972 ರಿಂದ ಬಳ್ಳಾರಿ ಮೆಡಿಕಲ ಕಾಲೇಜಿನಲ್ಲಿ ಪ್ಯಾಥಾಲಾಜಿ 1978 ರಲ್ಲಿ ಮುಗಿಸಿದರು ನಂತರ ಒಂದುವರ್ಷ ಹೌಸಮನ್ ಶಿಪ್ ಸೇವೆಸಲ್ಲಿಸುತ್ತಾ ನಂತರ ಬಳ್ಳಾರಿ ಜಿಲ್ಲೆಯ ಕುರುಗೋಡು ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎರಡುತಿಂಗಳತರಬೇತಿಯಸೇವೆಮಾಡಿದರು. ಎಂಬಿಬಿಎಸ್ ಮುಗಿಸಿ ನೇರವಾಗಿ ಕಲ್ಬುರ್ಗಿಗೆ ಬಂದ ಡಾ.ಎಸ್.ಎಸ. ಗುಬ್ಬಿಯವರು ಎಂ ಆರ್ ಎಂ ಸಿ ಯಲ್ಲಿ ಒಂದು ತಿಂಗಳು ಸೇವೆ ಸಲ್ಲಿಸಿದರು ನಂತರ 1979ರಲ್ಲಿ ಎಂ ಆರ್ ಎಂ ಸಿ ಕಾಲೇಜಿನಲ್ಲಿ ಉಪನ್ಯಾಸಕ ವೃ ತ್ತಿಗೆ ಸೇರಿದರು 1980 ರಲ್ಲಿ ಸೋಲಾಪುರದಪ್ರತಿಷ್ಠಿತಸುಸಂಸ್ಕೃತಮನೆತನದ ಶೋಭಾ ಅವರನ್ನುಮದುವೆಯಾದರು ನಂತರ ಎಂ.ಆರ. ಎಮ್ ಸಿ ಕಾಲೇಜಿನಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದರು. ಈಗಿನ ತೆಲಂಗಾಣ ರಾಜ್ಯದ ಎಂಎನ.ರಾಜು ವೈದ್ಯಕೀಯ ಕಾಲೇಜ ಸಂಗಾ ರೆಡ್ಡಿ ಯಲ್ಲಿ ಸ್ನಾತಕ ವಿದ್ಯಾರ್ಥಿಗಳಿಗೆ ಉಪನ್ಯಾಸಕರಾಗಿ ಕೆಲಸ ಮಾಡಿದರು ನಂತರ ಕಲ್ಬುರ್ಗಿಯ ಬಸವೇಶ್ವರ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿ ಅಲ್ಲಿಯೇ ನಿವೃತ್ತರಾದರು.

ಕಲಬುರ್ಗಿಯ ಸರ್ಕಾರಿ ಆಸ್ಪತ್ರೆಯಲ್ಲಿ ಬಡವರ ಸೇವೆಮಾಡಬೇಕು ಎನ್ನುವ ಉತ್ಕಟ ಆಸೆಯಿಂದ ಅಲ್ಲಿಯೂ ಕೆಲವು ವರ್ಷ ಸೇವೆ ಸಲ್ಲಿಸಿದರು.

ಒಟ್ಟಾರೆ ಡಾ. ಎಸ್, ಎಸ್ ,ಗುಬ್ಬಿ ಅವರು ಅಲ್ಲಿಂದ ಇಲ್ಲಿಯವರೆಗೆ 40 ವರ್ಷ ಸೇವೆ ಸಲ್ಲಿಸುತ್ತಾ ದಣಿವರಿಯದೆ ಈಗಲೂ ಕೂಡ ಸೇಡಂ ರಿಂಗ್ ರಸ್ತೆಯಲ್ಲಿ ಅವರದೇ ಆದ ಗುಬ್ಬಿ ಆಸ್ಪತ್ರೆಯಲ್ಲಿ ಇನ್ನೂ ಸೇವನಿರತರಾಗಿದ್ದಾರೆ.

ದುಡ್ಡು ಗಳಿಸಿಲ್ಲ ಆದರೆ ಕಲ್ಬುರ್ಗಿಯಲ್ಲಿ ಒಂದು ದೊಡ್ಡಹೆಸರುಗಳಿಸಿದ್ದಿಮಗಅಷ್ಟೇಸಾಕುಎಂದು ತಾಯಿಯ ಹಾರೈಕೆಯಾಗಿದೆ.ಡಾ.ಗುಬ್ಬಿ ಅವರು ತಮ್ಮ ವೈದ್ಯಕೀಯ ವೃತ್ತಿಯ ಜೊತೆಗೆ ಸಾಮಾಜಿಕ ಚಟುವಟಿಕೆ ,ಸಾಹಿತ್ಯ ಚಟುವಟಿಕೆಗಳಲ್ಲಿ ಕೂಡ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ ಸಾಕಷ್ಟು ಗೌರವಾನ್ವಿತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಅನೇಕ ಪ್ರಶಸ್ತಿ ಪುರಸ್ಕಾರ ಗೌರವಗಳಿಗೆ ಭಾಜನರಾಗಿದ್ದಾರೆ.

ಎರಡು ವರ್ಷ ಕಾಲ ಅರ್ಥೋಪೆಡಿಕ್ ಸಂಸ್ಥೆಯ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದಾರೆ .ಇಂಪ್ಯಾಕ್ಟ್ ಇಂಡಿಯಾ ಫೌಂಡೇಶನ್ ಮುಂಬೈ ಅವರಲ್ಲಿ ಉಚಿತ ಆರೋಗ್ಯ ಸೇವೆ ಮಾಡುತ್ತಿದ್ದಾರೆ. ತಮ್ಮ ಸೇವಾ ಅವಧಿಯಲ್ಲಿ ಗಾಣಗಾಪುರ, ವಾಡಿ ಮುಂತಾದ ಪಟ್ಟಣಗಳ ಆಸ್ಪತ್ರೆಗಳಲ್ಲಿ, ಕ್ಯಾಂಪುಗಳಲ್ಲಿ ಪೋಲಿಯೋ ಶಸ್ತ್ರಚಿಕಿತ್ಸೆ ಸೇವೆ ಮಾಡಿ ಬಡವರ ಸೇವೆ ಮಾಡಿದ್ದಾರೆ.

2004ರಲ್ಲಿಒಮ್ಮೆಮಾನ್ಯಮಾಜಿರಾಷ್ಟ್ರಪತಿಗಳಾದ ಎ.ಪಿ.ಜೆ ಅಬ್ದುಲ್ ಕಲಾಂ ಅವರು ಕಲ್ಬುರ್ಗಿಗೆ ಬಂದಾಗ ಅವರ ಬೆಂಗಾವಲಾಗಿ ಎಲುವು ಕೀಲು ತಜ್ಞ ವೈದ್ಯರಾಗಿ ಕೆಲಸ ಮಾಡಿದ್ದಾರೆ.

ಡಾ. ಎಸ್.ಎಸ. ಗುಬ್ಬಿ ಅವರು ರಾಜ್ಯಮಟ್ಟದ "ಸುವರ್ಣಸಂಭ್ರಮ"ಪ್ರಶಸ್ತಿಗೆಆಯ್ಕೆಯಾಗಿದ್ದಕ್ಕೆ ಅವರ ಕುಟುಂಬದವರಿಗೆ ಅವರ ಗ್ರಾಮಸ್ಥರಿಗೆ ಅಲ್ಲದೆ ಜಿಲ್ಲೆಗೆ ತಂದ ಗೌರವ ಆಗಿದೆ.

ಬಡ ರೋಗಿಗಳ ಪಾಲಿಗೆ ದೇವರಾಗಿ ಸಾಥ-'ರ್ಕ ಜೀವನ ಸಾಗಿಸುತ್ತಾ ಸಾಮಾಜಿಕ ಸಾಹಿತ್ಯ ಸೇವೆಯಲ್ಲಿಯೂ ಸಕ್ರಿಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಕಲ್ಬುರ್ಗಿಯಲ್ಲಿ ಪ್ರಸಿದ್ಧರಾಗಿದ್ದಾರೆ. ಇಲ್ಲಿಯವರೆಗೆ ಡಾ. ಗುಬ್ಬಿಯವರ 10 ಕವನ ಸಂಕಲನಗಳು ವೈದ್ಯಕೀಯ ಕ್ಷೇತ್ರದ ಬಗ್ಗೆ ವೈದ್ಯಾಮೃತ ಎಂಬ ಕೃತಿ ಅಲ್ಲದೆ ಅವರ ಆತ್ಮಕಥೆ "ಆತ್ಮ ಕವಚ" ಗ್ರಂಥಗಳು ಹೊರಬಂದಿವೆ. ಸಿದ್ದಣ ಗೌಡ ಮಾಲಿ ಪಾಟೀಲ್ ಹಾಗೂ ಗುಂಡು ರಾವ ಕಡಣಿ ಅವರ ಸಾರಥ್ಯದಲ್ಲಿ ಪ್ರಕಟವಾಗುತ್ತಿರುವ ಪ್ರಸಿದ್ಧ "ಗುರು ಉಪದೇಶ" ಮಾಸಪತ್ರಿಕೆ ಜೊತೆಗೆ 2015 ರಿಂದಲೂ ಒಡನಾಟ ಹೊಂದಿ ಬರಹಗಾರರಾಗಿ,ಅಂಕಣಕಾರರಾಗಿ ಸಾಹಿತ್ಯ ಸೇವೆ ಸಲ್ಲಿಸುತ್ತಿದ್ದಾರೆ. ಈ ಪತ್ರಿಕೆಯಲ್ಲಿ ಪ್ರತಿ ತಿಂಗಳು "ವೈದ್ಯಮೃತ "ಎನ್ನುವ ವೈದ್ಯಕೀಯ ಕ್ಷೇತ್ರದ ಎಲಬು ಮೂಳೆ ಚಿಕಿತ್ಸೆ ಬಗ್ಗೆ ಅಂಕಣ ಬರಹ ಕೂಡ ಬರೆಯುತ್ತಿದ್ದಾರೆ.

ಆಗಿನದಿನಗಳಲ್ಲಿಮಣ್ಣಿನರಸ್ತೆಯುಇರದಅಂತಹ ಕುಗ್ರಾಮ ಕೊಂಕಲದಿಂದ ಕಲಬುರ್ಗಿಗೆ ಬಂದು ತಂದೆ ತಾಯಿಯವರ ಪ್ರಯತ್ನ ಆಶೀರ್ವಾದದ ಫಲದಿಂದ ಅವರ ಸಂಸ್ಕಾರದ ಜಾಡು ಹಿಡಿದು ರೋಗಿಗಳೇ ದೇವರೆಂದು ಅವರ ತೇವವಾದ ಕರುಣಾಜನಕ ಕಣ್ಣುಗಳಲ್ಲಿನ ಕಣ್ಣೀರು ಒರೆಸುವ ನನ್ನ ವೈದ್ಯ ವೃತ್ತಿಯು ನನಗೆ ತೃಪ್ತಿ ತಂದಿದೆ ಎಂದು ಡಾ. ಎಸ್.ಎಸ. ಗುಬ್ಬಿ ಅವರು ಎದೆ ತುಂಬಿಹೇಳುತ್ತಾರೆ.ಸುವರ್ಣಸಂಭ್ರಮಪ್ರಶಸ್ತಿಗೆ ಭಾಜನರಾದ ಡಾ ಗುಬ್ಬಿ ಅವರಿಗೆ ನಮ್ಮೆಲ್ಲರ ವತಿಯಿಂದ ಹಾರ್ದಿಕ ಅಭಿನಂದನೆಗಳು.

* * *

**- ಶಿವ ಶರಣಪ್ಪ ಜಮಾದಾರ**
**'ಗುರು ಉಪದೇಶ**
**'ಪತ್ರಿಕಾ ಬಳಗ ಕಲಬುರ್ಗಿ**

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State